# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA

epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 • ಸಂಚಿಕೆ: 140 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 03.12.2024 • ಮಂಗಳವಾರ • ಪುಟ:04 • ಬೆಲೆ:2
Volume:02 • Issue: 140 • PRGI No:KARKAN/2023/88055 • VIJAYANAGARA • 03.12.2024 • Tuesday • Page:04 • Rs:2



BOOK YOUR ADVERTISEMENTS
TO REACH MORE READERS
1,00,000+
Digital E-PAPER READERS
M: 94486 33038
Book Advance Get More Benefits



No.1 HAMPI TIMES LEADING VIJAYANAGARA District News Paper


ಮೈಕ್ರೋ ನ್ಯೂಸ್

## ರಾಜ್ಯ ಉತ್ತಮ ಸಂಸ್ಥೆ ಪ್ರಶಸ್ತಿಗೆ ಸಾಧ್ಯ ಟ್ರಸ್ಟ್ ಆಯ್ಕೆ

■ ಹಂಪಿ ಟೈಮ್ಸ್ ಹೊಸಪೇಟೆ

ಸಾಧ್ಯ ಸಂಸ್ಥೆಯು 8 ವರ್ಷಗಳಿಂದ ಹೊಸಪೇಟೆಯಲ್ಲಿ ವಿಶೇಷ ಮಕ್ಕಳ ವಸತಿ ಶಾಲೆ ಮತ್ತು ವೃತ್ತಿ ತರಬೇತಿ ಕೇಂದ್ರವನ್ನು ನಡೆಸುತಿದ್ದು, ವಿಕಲಚೇತನರ ಕ್ಷೇತ್ರಗಳಲ್ಲಿ ವಿಶಿಷ್ಟ ಸೇವೆ ಸಲ್ಲಿಸಿದ್ದಕ್ಕಾಗಿ 2024ನೇ ಸಾಲಿನ ಉತ್ತಮ ಸಂಸ್ಥೆ ವಿಭಾಗದಡಿ ರಾಜ್ಯ ಮಟ್ಟದ ಪ್ರಶಸ್ತಿಗೆ ಆಯ್ಕೆಯಾಗಿದೆ.

ಬೆಂಗಳೂರಿನ ಕಂಠೀರವ ಒಳಾಂಗಣ ಕ್ರೀಡಾಂಗಣದಲ್ಲಿ ಡಿಸೆಂಬರ್ 3 ರಂದು ನಡೆಯುವ ವಿಶ್ವ ವಿಲಕಚೇತನರ ದಿನಾಚರಣೆ ಕಾರ್ಯಕ್ರಮದಲ್ಲಿ ಗಣ್ಯರು ಪ್ರಶಸ್ತಿ ಪ್ರಧಾನ ಮಾಡುವರು. ಸಾಧ್ಯ ಸಂಸ್ಥೆಯ ವತಿಯಿಂದ ಎಲ್ಲ ರೀತಿಯ ಬುದ್ಧಿಮಾಂದ್ಯತೆ ಸಮಸ್ಯೆಯಿರುವ ಮಕ್ಕಳಿಗಾಗಿ ಸಾಧ್ಯ ವಿಶೇಷ ಮಕ್ಕಳ ವಸತಿ ಶಾಲೆ ಮತ್ತು ವೃತ್ತಿ ತರಬೇತಿ ಕೇಂದ್ರವನ್ನು ಹೊಸಪೇಟೆ ಹಾಗೂ ಹಾಸನದಲ್ಲಿ ಕಳೆದ 7 ವರ್ಷದಿಂದ ನಡೆಸಿಕೊಂಡು ಬರುತ್ತಿದ್ದು, ಒಟ್ಟು 350 ಮಕ್ಕಳು ಈ ಸಂಸ್ಥೆಯಲ್ಲಿ ನೊಂದಣಿ ಮಾಡಿಕೊಂಡು ಉಚಿತವಾಗಿ ವಿಶೇಷ ಶಿಕ್ಷಣ ಪಡೆಯುತ್ತಿದ್ದಾರೆ. ಶಾಲೆಯಲ್ಲಿ 145 ವಸತಿ ಸಹಿತ ಮಕ್ಕಳು ಕೂಡ ವಿಶೇಷ ಶಿಕ್ಷಣದ ತರಬೇತಿ ಪಡೆಯುತ್ತಿದ್ದಾರೆ. ಸಾಧ್ಯ ಸಂಸ್ಥೆಯಲ್ಲಿ ಫಿಜಿಯೋತೆರಪಿ, ಸ್ಪೀಚ್ ತೆರಪಿ, ವಸತಿ ಸೌಲಭ್ಯಗಳಿದ್ದು, ಸ್ಪೆಷಲ್ ಒಲಿಂಪಿಕ್ಸ್ ಕ್ರೀಡಾಕೂಟ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಹಾಗೂ ವೃತ್ತಿ ತರಬೇತಿಗಳಿಗೆ ಉತ್ತೇಜನ ನೀಡಲಾಗುತ್ತಿದೆ ಎಂದು ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಅಧಿಕಾರಿ ಅವಿನಾಶ್ ಲಿಂಗ ಎಸ್. ಗೋಟಖಿಂಡಿ ತಿಳಿಸಿದ್ದಾರೆ.

# ಹಂಪಿ ಭೇಟಿ ಅನುಭವ ಮರೆಯಲಾರೆ

## ಟರ್ಕಿ ದೇಶದ ರಾಯಭಾರಿ ಹೆ.ಇ ಫಿರಟ್ ಸುನೆಲ್ ಅಭಿಮತ

■ ಹಂಪಿ ಟೈಮ್ಸ್ ಹೊಸಪೇಟೆ/ ಬಳ್ಳಾರಿ

ಟರ್ಕಿ ದೇಶದ ರಾಯಭಾರಿ ಹೆ.ಇ ಫಿರಟ್ ಸುನೆಲ್ ಅವರು, ಭಾನುವಾರ ಹಂಪಿಗೆ ಭೇಟಿ ನೀಡಿ ಶ್ರೀ ವಿರೂಪಾಕ್ಷೇಶ್ವರ ಸ್ವಾಮಿಯ ದರ್ಶನ ಪಡೆದರು. ನಂತರ ವಿಜಯನಗರ ಸಾಮ್ರಾಜ್ಯದ ಗತವೈಭವ ಸಾರುವ ಸ್ಮಾರಕಗಳನ್ನು ಕಣ್ತುಂಬಿಕೊಂಡು ಆಶ್ಚರ್ಯಚಕಿತಗೊಂಡರಲ್ಲದೆ ವಿಜಯ್ ವಿಠಲ ದೇವಸ್ಥಾನಕ್ಕೆ ಭೇಟಿ ನೀಡಿ, ವಿಠಲ ಬಜಾರ್, ಕಲ್ಲಿನ ರಥ, ಶಿಲ್ಪಕಲೆ, ಸಂಗೀತ ಕಂಬಗಳಲ್ಲಿನ ಸಂಗೀತವನ್ನು ಕ್ಯು ಆರ್ ಕೋಡ್ ಸ್ಕ್ಯಾನ್ ಮೂಲಕ ಡಿಜಿಟಲ್ ಸಂಗೀತ ಆಲಿಸಿ ಆನಂದಿಸಿದರು. ಉಗ್ರ ನರಸಿಂಹ, ಕಮಲ ಮಾಲ್, ಗಜ ಶಾಲೆ ಮಹಾನವಿ ದಿಬ್ಬ, ರಾಣಿ ಸ್ನಾನ ಗೃಹ ವೀಕ್ಷಿಸಿ ಚಿತ್ರಗಳನ್ನು ಸೆರೆಹಿಡಿದರು.

ಬಳ್ಳಾರಿಗೆ ಭೇಟಿ ನೀಡಿದ ಅವರು, ಕೊಳಗಲ್ ರಸ್ತೆಯ ವಿಮಾನ ನಿಲ್ದಾಣದ ಪಕ್ಕದಲ್ಲಿರುವ ಟರ್ಕಿಯ ಹುತಾತ್ಮರ ಸ್ಮಶಾನಕ್ಕೆ ಭೇಟಿ ನೀಡಿದರು.

ಇದೇ ವೇಳೆ ಟರ್ಕಿ ದೇಶದ ಮಹಾನೀಯರ ಸಮಾಧಿಗಳಿಗೆ ಗೌರವ ಸಲ್ಲಿಸಿ, ಸಸಿ ನೆಟ್ಟರು. ಸಮಾಧಿ ಸ್ಥಳದಲ್ಲಿ ಕೈಗೊಳ್ಳಲಾದ ವಿವಿಧ ಕಾಮಗಾರಿಗಳ ಕುರಿತು ಮಾಹಿತಿ ಪಡೆದ ನಂತರ ವಿಮ್ಸ್ ಸ್ಮಾರಕ ಸಮರ ನೌಕೆಗೆ ಭೇಟಿ ಕೊಟ್ಟರು. ಈ ಸಂದರ್ಭದಲ್ಲಿ ಪ್ರವಾಸೋದ್ಯಮ ಇಲಾಖೆಯ ಉಪನಿರ್ದೇಶಕ ಪ್ರಭುಲಿಂಗ ಎಸ್ ತಳಕೇರಿ, ಸಿಬ್ಬಂದಿಗಳಾದ ಶ್ರೀಹರಿ ಮಾಸನೂರು, ಪ್ರವಾಸಿ ಮಾರ್ಗದರ್ಶಿಯಾದ ವಿರೂಪಾಕ್ಷಿ.ವಿ ಹಂಪಿ ಹಾಗೂ ಟರ್ಕಿಶ್ ಮಾಟ್ರೈಸ್ ಸಿಮೆಟೆರಿ ಉಸ್ತುವಾರಿ ಇಬ್ರಾಹಿಂ ಸೇರಿದಂತೆ ಇತರರು ಇದ್ದರು.







# ಸೌತ್ ವೆಸ್ಟ್ರನ್ ರೈಲ್ವೆ ಮಜ್ದೂರ್ ಯೂನಿಯನ್‌ಗೆ ಮತದಾನ ಮಾಡಿ ಸಂಘಟನೆ ಬಲಪಡಿಸಿ : ಮಸ್ತಾನ್ ವಲಿ



■ ಹಂಪಿ ಟೈಮ್ಸ್ ಹೊಸಪೇಟೆ

ಭಾರತೀಯ ರೈಲ್ವೆಯು ತನ್ನ ಉದ್ಯೋಗಿಗಳಿಗೆ ಕಾರ್ಮಿಕ ಸಂಘಟನೆಯನ್ನು ಆಯ್ಕೆ ಮಾಡಲು ಚುನಾವಣೆಯನ್ನು "ಒಂದು ಒಕ್ಕೂಟ ಒಂದು ಉದ್ಯಮ" ನೀತಿಯ ಅಡಿಯಲ್ಲಿ ಡಿಸೆಂಬರ್ 04 ರಿಂದ 06, 2024ರವರೆಗೆ ರಹಸ್ಯ ಮತದಾನ (Secret Ballet) ಮೂಲಕ ನಡೆಸುತ್ತಿದೆ. ಸೌತ್ ವೆಸ್ಟ್ರನ್ ರೈಲ್ವೆ ಮಜ್ದೂರ್ ಯೂನಿಯನ್ (SWRMU) ನೇತೃತ್ವದ ಪ್ರಧಾನ ಕಾರ್ಯದರ್ಶಿ ಎ.ಎಂ.ಡಿ ಕ್ರೂಜ್ ಸಂಘಟನೆಯು 2013 ರಿಂದಲೂ ನೈರುತ್ಯ ರೈಲ್ವೆ ವಲಯದಲ್ಲಿ ಏಕೈಕ ಒಕ್ಕೂಟವಾಗಿದೆ. ನೌಕರರ ಹಿತ ಕಾಯುವ ಸೌತ್ ವೆಸ್ಟ್ರನ್ ರೈಲ್ವೆ ಮಜ್ದೂರ್ ಯೂನಿಯನ್‌ಗೆ ಹೆಚ್ಚಿನ ಸಂಖ್ಯೆಯಲ್ಲಿ ಮತದಾನ ಮಾಡಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಯುನಿಯನ್‌ಗೆ ಬಲತುಂಬಬೇಕು ಎಂದು ಯುನಿಯನ್ ಹೊಸಪೇಟೆ ಶಾಖೆಯ ಕಾರ್ಯದರ್ಶಿ ಎಸ್.ಮಸ್ತಾನ್‌ವಲಿ ಮನವಿ ಮಾಡಿದರು.

ನಗರದಲ್ಲಿ ಸೋಮವಾರ ಸಂಘಟನೆಯ ಪರವಾಗಿ ಮತಯಾಚಿಸಿ ಮಾತನಾಡಿದರು. ನೈರುತ್ಯ ರೈಲ್ವೆಯಲ್ಲಿ ಸೌತ್ ವೆಸ್ಟ್ರನ್ ರೈಲ್ವೆ ಮಜ್ದೂರ್ ಯೂನಿಯನ್ (SWRMU), ನೈರುತ್ಯ ರೈಲ್ವೆ ನೌಕರರ ಸಂಘ (SWRES), ನೈರುತ್ಯ ರೈಲ್ವೆ ಮಜ್ದೂರ್ ಸಂಘ (NRMS), ಮತ್ತು ನೈರುತ್ಯ ರೈಲ್ವೆ ನೌಕರರ ಸಂಘ (SWREU). ನಾಲ್ಕು ಕಾರ್ಮಿಕ ಪಕ್ಷಗಳು ಚುನಾವಣೆಯಲ್ಲಿ ಸ್ಪರ್ಧಿಸುತ್ತಿವೆ. ಸೌತ್ ವೆಸ್ಟ್ರನ್ ರೈಲ್ವೆ ಮಜ್ದೂರ್ ಯೂನಿಯನ್ ನೌಕರರ ಹಿತಕಾಪಾಡುವಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿದೆ. ಉದ್ಯೋಗಿ ಸಮಸ್ಯೆಗಳನ್ನು ಪರಿಹರಿಸಲು ಒಕ್ಕೂಟವು ಸಕ್ರಿಯವಾಗಿ ಕಾರ್ಯನಿರ್ವಹಿಸುತ್ತಿದೆ. ಕೇಂದ್ರ ಸರ್ಕಾರವು ಆರ್ಥಿಕ ಸುಧಾರಣೆಗಳ ಹೆಸರಿನಲ್ಲಿ ರೈಲ್ವೆಯನ್ನು ಖಾಸಗೀಕರಣಗೊಳಿಸುವ ನಿಟ್ಟಿನಲ್ಲಿ ಪ್ರಕ್ರಿಯೆಗಳನ್ನು ಆರಂಭಿಸಿದೆ ರೈಲ್ವೆಯು ಕ್ರಮೇಣವಾಗಿ ವ್ಯಾಪಾರಿ ವಲಯವಾಗಿ ಬದಲಾಗುತ್ತಿದೆ. ರೈಲ್ವೆ ಇಲಾಖೆಯು ನೌಕರರ ಸಂಖ್ಯೆಯನ್ನು ಭಾರಿ ಪ್ರಮಾಣದಲ್ಲಿ ಕಡಿತಗೊಳಿಸಲಾಗುತ್ತಿದೆ. ಎಲ್ಲಾ ರೈಲ್ವೆ ನೌಕರರು ಆಮೀಷ-ಒತ್ತಡಗಳಿಗೆ ಒಳಗಾಗದೆ SWRMU ಕ್ರ.ಸಂಖ್ಯೆ: 04, ಟೈಗರ್ ಗುರುತಿಗೆ ಮತ ಹಾಕುವುದರ ಮೂಲಕ ಬೆಂಬಲಿಸಬೇಕೆಂದು ಮನವಿ ಮಾಡಿದರು. ಡಿ.12 ರಂದು ಚುನಾವಣಾ ಫಲಿತಾಂಶ ಪ್ರಕಟವಾಗಲಿದೆ ಎಂದು ತಿಳಿಸಿದರು.


ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ (ರಿ)
ವಿಜಯನಗರ ಜಿಲ್ಲಾ ಸರಕಾರಿ ನೌಕರರ ಸಮಾನ ಮನಸ್ಕರ ವೇದಿಕೆ
ಜಿಲ್ಲಾಧ್ಯಕ್ಷರು, ಜಿಲ್ಲಾ ಖಜಾಂಚಿ ಮತ್ತು ರಾಜ್ಯ ಪರಿಷತ್ತು ಸದಸ್ಯರ ಸ್ಥಾನದ ಚುನಾವಣೆ 2024–29

ಇಲ್ಲಿ ಎಲ್ಲರೂ ಸಮಾನರು, ಸದೃಢ ಸಂಘಟನೆ ರಚನೆಗೆ
ನಮಗೆ ಮತದಾನ ಮಾಡಿ ಆಶೀರ್ವದಿಸಿ

ಗೌರವಾನ್ವಿತ ನೌಕರ ಬಂಧುಗಳೇ,
ನೌಕರರ ಸಂಘದ ಜಿಲ್ಲಾಧ್ಯಕ್ಷರು, ಜಿಲ್ಲಾ ಖಜಾಂಚಿ ಮತ್ತು ರಾಜ್ಯ ಪರಿಷತ್ತು ಸದಸ್ಯರ ಸ್ಥಾನದ ಚುನಾವಣೆ ಹಿನ್ನಲೆಯಲ್ಲಿ ಸದೃಢ ಸಂಘಟನೆ ಕಟ್ಟುವ ಸದುದ್ದೇಶದಿಂದ ಹಾಗೂ ನೌಕರರಿಗೆ ಪ್ರಾಮಾಣಿಕವಾಗಿ ಸ್ಪಂದಿಸುವ ನಿಟ್ಟಿನಲ್ಲಿ ಚುನಾವಣೆಯಲ್ಲಿ ಸ್ಪರ್ಧಿಸಿದ್ದೇವೆ. ನೌಕರರ ಭವಿಷ್ಯ ನಿಮ್ಮ ಕೈಯಲ್ಲಿದೆ! ನಿಮ್ಮ ಸೇವೆಗಾಗಿ ನಾವು ಸದಾ ಸಿದ್ಧ. ನಿಮ್ಮದೊಂದು ಮತ ಪ್ರಗತಿಗೆ ಹಿತವಾಗಲಿ.



ಅಧ್ಯಕ್ಷ ಸ್ಥಾನದ ಅಭ್ಯರ್ಥಿ ಕ್ರಮ ಸಂಖ್ಯೆ 2
ಶ್ರೀ ರಾಜೀವ್ ಹೆಚ್
ಕಛೇರಿ ಅಧೀಕ್ಷಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ಹೊಸಪೇಟೆ, ವಿಜಯನಗರ ಜಿಲ್ಲೆ



ಖಜಾಂಚಿ ಸ್ಥಾನದ ಅಭ್ಯರ್ಥಿ ಕ್ರಮ ಸಂಖ್ಯೆ 2
ಶ್ರೀ ಮಾಲತೇಶ ಮರೇಗೌಡರ
ಲೆಕ್ಕಾಧೀಕ್ಷಕರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ,
ಹೊಸಪೇಟೆ, ವಿಜಯನಗರ ಜಿಲ್ಲೆ



ರಾಜ್ಯ ಪರಿಷತ್ ಸ್ಥಾನದ ಅಭ್ಯರ್ಥಿ ಕ್ರಮ ಸಂಖ್ಯೆ 2
ಶ್ರೀ ಸೈಯದ್ ಕಲೀಂ ಉಲ್ಲಾ
ವಾಣಿಜ್ಯ ತೆರಿಗೆ ಪರಿವೀಕ್ಷಕರು, ವಾಣಿಜ್ಯ ತೆರಿಗೆ ಜಂಟಿ ಆಯುಕ್ತರ ಕಛೇರಿ,
ಹೊಸಪೇಟೆ, ವಿಜಯನಗರ ಜಿಲ್ಲೆ

ಸೇವಾ ಧ್ಯೇಯೋದ್ದೇಶಗಳು

- ವಿಜಯನಗರ ಜಿಲ್ಲೆಯ ಸರ್ಕಾರಿ ನೌಕರರ ಸಂಘದ ಕಟ್ಟಡವನ್ನು ನೂತನವಾಗಿ ಹಾಗೂ ಸುಸಜ್ಜಿತವಾಗಿ ನಿರ್ಮಾಣ ಮೊದಲ ಆದ್ಯತೆ
- ವಿಜಯನಗರ ಜಿಲ್ಲೆಯ ಸರ್ಕಾರಿ ನೌಕರರ ಆರ್ಥಿಕ ಅನುಕೂಲಕ್ಕಾಗಿ ಮತ್ತು ಭದ್ರತೆಗಾಗಿ ನೌಕರರ ಪತ್ತಿನ ಸಹಕಾರಿ ಬ್ಯಾಂಕ್ ಹೊಂದುವ ಸದುದ್ದೇಶ ಹೊಂದಿರುತ್ತೇವೆ
- ಕಲ್ಯಾಣ ಕರ್ನಾಟಕ ವಿಶೇಷ ಸ್ಥಾನಮಾನ 371(ಜೆ) ಅನುಷ್ಠಾನಕ್ಕೆ ಸಂಬಂಧಿಸಿದಂತೆ ಜಿಲ್ಲೆಯ ನೌಕರರ ಮುಂಬಡ್ತಿ, ವಿಶೇಷ ಮಂಜೂರು ಮಾಡಿಸುವ ಉದ್ದೇಶ ಹೊಂದಿರುತ್ತೇವೆ.
- ಜಿಲ್ಲೆಯ ಎಲ್ಲಾ ಇಲಾಖೆಯ ನೌಕರರಿಗೆ ಪ್ರತಿ ತಿಂಗಳ ಮಾಸಿಕ ವೇತನ ತಿಂಗಳ ಪ್ರಾರಂಭದಲ್ಲಿ ದೊರೆಯುವಂತೆ ಪ್ರಯತ್ನಿಸುವುದು.
- ಜಿಲ್ಲೆಯಲ್ಲಿ ಪ್ರಾರಂಭವಾಗದೇ ಇರುವ ಇಲಾಖೆಗಳ ಸ್ಥಾಪನೆಗೆ ಕ್ರಮವಹಿಸಲು ಪ್ರಯತ್ನಿಸುವುದು
- ವಿಜಯನಗರ ಜಿಲ್ಲೆಯ ಮಹಿಳಾ ನೌಕರರು, ಅವರುಗಳು ಕರ್ತವ್ಯ ನಿರ್ವಹಿಸುವ ಸ್ಥಳದಲ್ಲಿ ಅವರುಗಳ ಹಕ್ಕುಗಳಿಗೆ ಧಕ್ಕೆಬಾರದಂಥೆ, ಪ್ರಾಮಾಣಿಕ ಸೇವೆ ಮಾಡುವ ಸುಂದರ ವಾತವರಣ ನಿರ್ಮಿಸಿ ಕೊಡುವುದು.
- 40 ವರ್ಷ ಮೀರಿದ ಎಲ್ಲಾ ನೌಕರರನ್ನು ಗಮನದಲ್ಲಿಟ್ಟುಕೊಂಡು ಪ್ರತಿ 6 ತಿಂಗಳಿಗೊಮ್ಮೆ ಉಚಿತ ಆರೋಗ್ಯ ಶಿಬಿರಗಳನ್ನು ತಜ್ಞ ವೈದ್ಯರಿಂದ ಆಯೋಜಿಸಲಾಗುವುದು.
- ಹೊಸಪೇಟೆ ನಗರವು ಪ್ರವಾಸಿ ಕೇಂದ್ರವಾಗಿರುವುದರಿಮದ ವಿವಿಧ ಭಾಗದ ನೌಕರರು ಆಗಮಿಸುವುದರಿಂದ ಸುಸಜ್ಜಿತ 10 ವಸತಿ ಗೃಹಗಳನ್ನು ನಿರ್ಮಾಣ ಮಾಡುವ ಸದುದ್ದೇಶ ಹೊಂದಿರುತ್ತೇವೆ.
- ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಜಂಟಿ ಸಮಾಲೋಚನಾ ಸಮಿತಿ ಸಭೆಗಳು ಕಾಲಕಾಲಕ್ಕೆ ಸಮರ್ಪಕವಾಗಿ ನಡೆಯುವಂತೆ ಹಾಗೂ ಸಭೆಯಲ್ಲಿ ತೆಗೆದುಕೊಂಡ ನಿರ್ಣಯಗಳನ್ನು ಅನುಷ್ಠಾನಗೊಳಿಸಲು ಪ್ರಯತ್ನಿಸುವ ಉದ್ದೇಶ ಹೊಂದಿರುತ್ತೇವೆ.
- ಜಿಲ್ಲೆಯಲ್ಲಿ ನೌಕರರ ಪ್ರತಿಭಾವಂತ ಮಕ್ಕಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಉಚಿತ ತರಬೇತಿಯನ್ನು ಆಯೋಜಿಸುವುದು.
- ಜಿಲ್ಲೆಯ ಎಸ್‌ಎಸ್‌ಎಲ್‌ಸಿ, ಪಿಯುಸಿ, ವೃತ್ತಿ ಶಿಕ್ಷಣ ಹಾಗೂ ಉನ್ನತ ವಿದ್ಯಾಭ್ಯಾಸದಲ್ಲಿ ಹೆಚ್ಚು ಅಂಕಗಳನ್ನು ಪಡೆದ ಮಕ್ಕಳಿಗೆ ಪ್ರತಿಭಾ ಪುರಸ್ಕಾರ

ಮತದಾನ
ದಿನಾಂಕ: 04–12–2024, ಬುಧವಾರ
ಬೆಳಿಗ್ಗೆ 09–00 ರಿಂದ ಸಂಜೆ 04–00 ಗಂಟೆಯವರಗೆ
ಸ್ಥಳ : ಸರ್ಕಾರಿ ನೌಕರರ ಭವನ, ಸಂಡೂರು ರಸ್ತೆ, ಹೊಸಪೇಟೆ

ನಮ್ಮ ತಂಡದ ಉದ್ದೇಶ ಸ್ನೇಹ, ಸೌಹಾರ್ದ ಹಾಗೂ ಸದೃಡ ಸಂಘಟನೆಯೇ ನಮ್ಮ ಗುರಿ

ನಿಮ್ಮ ಬೆಂಬಲದ ನಿರೀಕ್ಷೆಯಲ್ಲಿ ತಮ್ಮ ಆಗಮನಾಭಿಲಾಷಿಗಳು : ಶ್ರೀ ರಾಜೀವ್ ಹೆಚ್ | ಶ್ರೀ ಮಾಲತೇಶ ಮರೇಗೌಡರ | ಶ್ರೀ ಸೈಯದ್ ಕಲೀಂ ಉಲ್ಲಾ | ಪ್ರಕಟಣೆ: ಸಮಾನ ಮನಸ್ಕರ ವೇದಿಕೆ, ವಿಜಯನಗರ ಜಿಲ್ಲೆ

## ಸ್ಟುಡೆಂಟ್ ಕಾಲಂ

### ತಾಯಿ ಪ್ರೇಮ



ಸೂಲದಹಳ್ಳಿಯಲ್ಲಿ ಬಸಣ್ಣನೆಂಬ ಗೊಲ್ಲನಿದ್ದ. ಅವನು ಹಸು–ಎಮ್ಮೆಗಳನ್ನು ಮೇಯಿಸಲು ಬೆಟ್ಟದ ಕಡೆಗೆ ಹೋಗುತ್ತಿದ್ದನು. ಅವನ ಬಳಿ 'ನಾಗು' ಎಂಬ ಹಸುವಿದ್ದಿತು. ನಾಗು ಎಂದರೆ ಬಸಣ್ಣನಿಗೆ ತುಂಬಾ ಪ್ರೀತಿ. ನಾಗುಗೂ ಕೂಡ ಬಸಣ್ಣನೆಂದರೆ ತುಂಬಾ ಪ್ರೀತಿ. ನಾಗುವಿನೊಡನೆ ಆಡುವುದೆಂದರೆ, ಕಾಲ ಕಳೆಯುವುದೆಂದರೆ ಬಸಣ್ಣನಿಗೆ ತುಂಬಾ ಖುಷಿ. ಒಂದು ದಿನ ನಾಗು ಮುದ್ದಾದ ಕರುವಿಗೆ ಜನ್ಮ ನೀಡಿತು. ಬಸಣ್ಣ ಆ ಕರುವಿಗೆ 'ಚಂದು' ಎಂದು ಹೆಸರಿಟ್ಟನು.

ದಿನನಿತ್ಯದಂತೆ ಬಸಣ್ಣ ಹಸು ಎಮ್ಮೆಗಳನ್ನು ಮೇಯಿಸಲು ನಾಗು ಹಸುವೊಂದನ್ನು ಕೊಟ್ಟಿಗೆಯಲ್ಲಿ ಬಿಟ್ಟು ಬೆಟ್ಟದ ಕಡೆಗೆ ಹೋದನು. ಆ ದಿನ ಬಸಣ್ಣನಿಗೆ ಮೈ ಸರಿ ಇರಲಿಲ್ಲ. ಹಸು ಎಮ್ಮೆಗಳನ್ನು ಮೇಯಲು ಬಿಟ್ಟು ಒಂದು ಮರದಡಿ ಮಲಗಿ ನಿದ್ದೆ ಮಾಡಿದ. ಆ ಬೆಟ್ಟದ ಬಲಭಾಗದಲ್ಲಿ ಒಂದು ಗುಹೆ ಇತ್ತು. ಅಲ್ಲಿ ಎರಡು ದಂಪತಿ ಹುಲಿಗಳು ವಾಸವಾಗಿದ್ದವು. ಅಲ್ಲೇ ಮೇಯುತ್ತಿದ್ದ ಎಳೆ ಕರು ಚಂದುವನ್ನು ನೋಡಿದ ಹೆಣ್ಣು ಹುಲಿ 'ಆ ಕರು ತಿನ್ನಲು ಬಲು ರುಚಿ ಇರುತ್ತದೆ. ನನಗೆ ತಂದು ಕೊಡಿ' ಎಂದು ಗಂಡು ಹುಲಿಗೆ ಹೇಳಿತು. ಗಂಡು ಹುಲಿ ಛಂಘನೇ ಹಾರಿ ಎಳೆ ಕರುವನ್ನು ಎಳೆದು ತಂದು ಗುಹೆಯಲ್ಲಿ ಬಿಟ್ಟಿತು. ಇತ್ತ ಎಲ್ಲಾ ಹಸು ಎಮ್ಮೆಗಳು ಚಂದುವಿಗೊದಗಿದ ಪರಿಸ್ಥಿತಿ ನೋಡಿ ಮಮ್ಮಲ ಮರುಗಿದವು.



ಎಷ್ಟೋ ಹೊತ್ತಾದ ಮೇಲೆ ಎಲ್ಲಾ ಹಸು ಎಮ್ಮೆಗಳನ್ನು ಹೊಡೆದುಕೊಂಡು ಬಸಣ್ಣನು ಸೂಲದಹಳ್ಳಿ ಸೇರಿದನು. ತಂದೆ ತಾಯಿ ಹುಲಿಗಳು ಬೇಟೆಗೆ ಹೋದ ಸಂದರ್ಭದಲ್ಲಿ ಆ ಗುಹೆಯಲ್ಲಿದ್ದ ಎರಡು ಹುಲಿ ಮರಿಗಳು ತಪ್ಪಿಸಿಕೊಂಡು ಬಸಣ್ಣನ ಕೊಟ್ಟಿಗೆ ಸೇರಿದವು. ಅಷ್ಟೇ ಅಲ್ಲದೇ ನಾಗುವಿನ ಹಾಲು ಕುಡಿಯ ತೊಡಗಿದವು.

ಗುಹೆಯಲ್ಲಿ ಪ್ರೀತಿಯ ಕಂದಮ್ಮಗಳನ್ನು ಕಾಣದೆ ಹುಲಿಗಳು ಈಚೆಗೆ ಬಂದು ನಾಗುವಿನ ಬಳಿ ಇದ್ದ ತಮ್ಮ ಮರಿಗಳನ್ನು ಕಂಡು ಆಶ್ಚರ್ಯಪಟ್ಟವು. ಹೆಣ್ಣುಹುಲಿಗಂತೂ ಅಪಾರ ವೇದನೆಯಾಯ್ತು. ನಾನು ಆ ಹಸುವಿನ ಕಂದಮ್ಮನನ್ನು ತಿನ್ನಲು ಯೋಚಿಸಿದೆನು. ಆಗ ಆ ತಾಯಿ ಹಸು ಎಷ್ಟು ನೊಂದಿರಬೇಕು. ಆದರೂ ಸಹ ನನ್ನ ಮಕ್ಕಳಿಗೆ ಹಾಲುಣಿಸುತ್ತಿದೆಯಲ್ಲ ಇದೇ ಅಲ್ಲವೇ ತಾಯಿ ಪ್ರೇಮ ಎಂದುಕೊಂಡು ತಿನ್ನಲು ತಂದಿದ್ದ ಎಳೆ ಕರುವನ್ನು ವಾಪಸ್ ಕಳುಹಿಸಿತು. ಚಂದು ನಾಗುವಿನ ಬಳಿ ಓಡೋಡಿ ಬಂದು ಅದರ ಮಡಿಲನ್ನು ಸೇರಿತು. ಹುಲಿ ಮರಿಗಳು ತನ್ನ ತಾಯಿಯ ಮಡಿಲನ್ನು ಸೇರಿದವು.

– ಸಜಿನಿ. ಎಂ. 8 ನೇ ತರಗತಿ.
ಸರಕಾರಿ ಪ್ರೌಢಶಾಲೆ.ಸೂಲದಹಳ್ಳಿ. ಕೂಡ್ಲಿಗಿ(ತಾ)

### ಪ್ರೀತಿಯ ವಿದ್ಯಾರ್ಥಿಗಳೇ ನೀವೂ ಬರೆಯಿರಿ

ಪ್ರೀತಿಯ ವಿದ್ಯಾರ್ಥಿಗಳೇ ನಿಮಗಾಗಿ ನಿಮ್ಮ ಬರವಣಿಗೆ ಕೌಶಲ ಹೆಚ್ಚಿಸಿಕೊಳ್ಳಲು **ಹಂಪಿ ಟೈಮ್ಸ್ ಸ್ಟುಡೆಂಟ್ ಕಾಲಂ ವೇದಿಕೆ** ಕಲ್ಪಿಸಿದೆ. ನೀವು ಸಣ್ಣ ಸಣ್ಣ ಕಥೆ, ಕವನಗಳನ್ನು ಬರೆಯಬಹುದು. ಇಂದೇ ಆರಂಭಿಸಿ ನೀವು ಭವಿಷ್ಯದಲ್ಲಿ ಲೇಖಕರಾಗಿ ಬೆಳೆಯಿರಿ.
ಇ–ಮೇಲ್:hampitimes@gmail.com
M: 94486 33038

# ಓದಿದ್ದು ನೆನಪಿನಲ್ಲಿ ಉಳಿಯುತ್ತಿಲ್ಲವೇ ಹೀಗೆ ಮಾಡಿ..!

ಸ್ಮರಣೆಯು ನಡವಳಿಕೆಯ ಎಲ್ಲಾ ಅಂಶಗಳಲ್ಲಿ ಕೇಂದ್ರ ಪ್ರಕ್ರಿಯೆಯಾಗಿದೆ ಮೋರ್ಗನ್ ಪ್ರಕಾರ (1979) "ಜ್ಞಾಪಕವು ಹಿಂದೆ ಕಲಿತ ವಿಷಯಗಳ ಸಂಗ್ರಹಣೆ ಮತ್ತು ಮರುಪಡೆಯುವಿಕೆಯಾಗಿದೆ." ಹಿಂದಿನದನ್ನು ನೆನಪಿಟ್ಟುಕೊಳ್ಳಲು,ಹೊಸ ಮಾಹಿತಿಯನ್ನು ಉಳಿಸಿಕೊಳ್ಳಲು, ಸಮಸ್ಯೆಗಳನ್ನು ಪರಿಹರಿಸಲು ಅಥವಾ ನೀವು ಸ್ಮರಣೆಯನ್ನು ಹೊಂದಿಲ್ಲದಿದ್ದರೆ ಭವಿಷ್ಯಕ್ಕಾಗಿ ಯೋಜಿಸಲು ಸಾಧ್ಯವಾಗುವುದಿಲ್ಲ. ಕಲಿಕೆಗೆ ಬಲವಾದ ನೆಲೆಯನ್ನು ನಿರ್ಮಿಸುವಲ್ಲಿ ಸ್ಮರಣೆಯು ಅತ್ಯಗತ್ಯ ಭಾಗವಾಗಿದೆ. ಉತ್ತಮ ಜ್ಞಾಪಕಶಕ್ತಿ ಉತ್ತಮ ಪ್ರದರ್ಶನ ನೀಡಲು,ಶಾಲಾ ಪರೀಕ್ಷೆಗಳು ಅಥವಾ ಯಾವುದೇ ಇತರ ಸಹಪಠ್ಯ ಚಟುವಟಿಕೆಗಳಲ್ಲಿ ಉತ್ತಮ ಶ್ರೇಣಿಗಳನ್ನು ಸಾಧಿಸಲು ಸಹಾಯ ಮಾಡುತ್ತದೆ. ನೆನಪಿನ ಶಕ್ತಿ ಉಳಿಸಿಕೊಳ್ಳುವುದು ಈ ಕೆಳಕಂಡ ಕೆಲವು ಸರಳ ಅಳವಡಿಕೆಗಳು ಅನುಕೂಲವಾಗಬಹುದು.



### 1. ಹೊಸದನ್ನು ಕಲಿಯಿರಿ

ಜ್ಞಾಪಕ ಶಕ್ತಿಯು ಸ್ನಾಯುವಿನ ಬಲವನ್ನು ಹೋಲುತ್ತದೆ ಇದು ಹೆಚ್ಚು ಹೆಚ್ಚು ಬಳಕೆಯಿಂದ ಬಲಗೊಳ್ಳುತ್ತದೆ. ಹೊಸ ಕೌಶಲ್ಯದ ಕಲಿಕೆ ಮೆದುಳಿನ ಮೆಮೊರಿ ಸಾಮರ್ಥ್ಯವನ್ನು ಬಲಪಡಿಸಲು ಉತ್ತಮ ಮಾರ್ಗ. ಆಸಕ್ತಿಕರವಾಗಿ ತೋರುವ ಯಾವುದೇ ಹೊಸ ಚಟುವಟಿಕೆಯನ್ನು ಕಲಿಯಲು ನೀವು ಆಯ್ಕೆ ಮಾಡಬಹುದು.

ಉದಾ:–ಪಿಯಾನೋ, ಗಿಟಾರ್, ಡ್ರಮ್ಸ್ ಇತ್ಯಾದಿ ಹೊಸ ವಾದ್ಯವನ್ನು ಕಲಿಯುವುದು, ಸುಡೋಕು ಅಥವಾ ಚೆಸ್‌ನಂತಹ ಮೈಂಡ್ ಪಝಲ್ ಗೇಮ್‌ಗಳನ್ನು ಆಡುವುದು, ಸಾಲ್ಸಾ, ಹಿಪ್–ಹಾಪ್, ಶಾಸ್ತ್ರೀಯ, ಇತ್ಯಾದಿಗಳಂತಹ ಹೊಸ ಪ್ರಕಾರದ ನೃತ್ಯವನ್ನು ಕಲಿಯುವುದು. ಫ್ರೆಂಚ್, ಸ್ಪ್ಯಾನಿಷ್, ಜರ್ಮನ್, ಮುಂತಾದ ಹೊಸ ಭಾಷೆಯನ್ನು ಕಲಿಯುವುದು.

### 2. ಕಲಿಕಾ ವೇಳಾಪಟ್ಟಿ

ಅಧ್ಯಯನವು ಕೆಲಸವಾಗಿದೆ ಮತ್ತು ಸಮಯ ತೆಗೆದುಕೊಳ್ಳುತ್ತದೆ, ಆದ್ದರಿಂದ ನೀವು ಅನುಸರಿಸಬಹುದಾದ ಅಧ್ಯಯನ ವೇಳಾಪಟ್ಟಿಯನ್ನು ಯೋಜಿಸಿ.

ಅಧ್ಯಯನದ ಕೆಲಸಕ್ಕೆ ಸಮಯವನ್ನು ಮೀಸಲಿಡಿ ಇತರೆ ವಿಚಲಿತಗೊಳಿಸುವ ಚಟುವಟಿಕೆಗಳಿಂದ ದೂರವಿರಿ.

ನಿಮ್ಮ ನಿಗದಿತ ಅಧ್ಯಯನದ ಸಮಯದಲ್ಲಿ ನೀವು ಇಷ್ಟಪಟ್ಟು ಅಧ್ಯಯನ ಮಾಡಿ ಅಲ್ಲದೆ,ನಿಮ್ಮನ್ನು ಸಂಘಟಿಸಿ,ಸಂಘಟಿತ ವ್ಯಕ್ತಿಯು ವಿಷಯಗಳನ್ನು ನೆನಪಿಟ್ಟುಕೊಳ್ಳಲು ಸುಲಭವಾಗುತ್ತದೆ.

ಪರಿಶೀಲನಾಪಟ್ಟಿಯನ್ನು ಮಾಡಿ ಮತ್ತು ಒಮ್ಮೆ ಪೂರ್ಣಗೊಳಿಸಿದ ವಿಷಯಗಳನ್ನು ಹೊಡೆಯಿರಿ ಅದು ನಿಮ್ಮ ಅಲ್ಪಾವಧಿಯ ಮತ್ತು ದೀರ್ಘಾವಧಿಯ ಗುರಿಗಳನ್ನು ಪರಿಣಾಮಕಾರಿಯಾಗಿ ಸಾಧಿಸಲು ಸಹಾಯ ಮಾಡುತ್ತದೆ ಇದೊಂದು ಸರಳ,ಆದರೆ ಪರಿಣಾಮಕಾರಿ ಮಾರ್ಗವಾಗಿದೆ.

### 3. ದೈಹಿಕ ಚಟುವಟಿಕೆಗಳು

ಪ್ರತಿದಿನದ ವ್ಯಾಯಾಮ ಸದೃಢತೆಯೊಂದಿಗೆ ಆರೋಗ್ಯಕರವಾಗಿರಲು ಹಾಗೂ ಮೆದುಳಿನ ಶಕ್ತಿಯನ್ನು ಹೆಚ್ಚಿಸಲು ಸಹಾಯ ಮಾಡುತ್ತದೆ.



ಡಾ.ಸುಧಾಕರ ಜಿ.ಲಕ್ಕವಳ್ಳಿ
ಲೇಖಕರು 8747969381

Scan For Digital Colourful
HAMPI TIMES E-paper

ಇದು ಮೆದುಳಿಗೆ ಆಮ್ಲಜನಕದ ಪೂರೈಸಿ ಒತ್ತಡದ ಹಾರ್ಮೋನುಗಳ ಚಟುವಟಿಕೆಯನ್ನು ಕಡಿಮೆ ಮಾಡಿ ದೇಹಕ್ಕೆ ಪೋಷಕಾಂಶಗಳ ವಿತರಣೆಯನ್ನು ಹೆಚ್ಚಿಸುತ್ತದೆ ಮತ್ತು ಮೆಮೊರಿ ನಷ್ಟಕ್ಕೆ ಕಾರಣವಾಗುವ ಅಸ್ವಸ್ಥತೆಗಳ ಅಪಾಯವನ್ನು ಕಡಿಮೆ ಮಾಡುತ್ತದೆ.

ರಕ್ತವನ್ನು ಪಂಪ್ ಮಾಡುವ ವ್ಯಾಯಾಮಗಳನ್ನು ಆಯ್ಕೆಮಾಡಿ ಅವುಗಳಲ್ಲಿ ಏರೋಬಿಕ್ ವ್ಯಾಯಾಮ, ಕೈ–ಕಣ್ಣಿನ ಸಮನ್ವಯ ಅಥವಾ ಸಂಕೀರ್ಣ ಮೋಟಾರ್ ಕೌಶಲ್ಯಗಳು, ದಿನಕ್ಕೆ 15 ನಿಮಿಷಗಳ ನಡಿಗೆ, ಪ್ರತಿದಿನ 20 ನಿಮಿಷಗಳ ಯೋಗಾಭ್ಯಾಸ ಇವು ನಿಮ್ಮ ಸ್ಮರಣೆಯನ್ನು ಹೆಚ್ಚಿಸುತ್ತದೆ.

### 4. ಗಮನ ಕೊಡಿ

ಅಲ್ಪಾವಧಿಯ ಸ್ಮರಣೆಯಿಂದ ನಿಮ್ಮ ದೀರ್ಘಾವಧಿಯ ಸ್ಮರಣೆಗೆ ಚಲಿಸಲು ನೀವು ಮಾಹಿತಿಗೆ ಸಕ್ರಿಯವಾಗಿ ಹಾಜರಾಗಬೇಕು. ನೀವು ಸುಲಭವಾಗಿ ವಿಚಲಿತರಾಗಿದ್ದರೆ,ನಿಮಗೆ ಅಡ್ಡಿಯಾಗದ ಶಾಂತ ಸ್ಥಳವನ್ನು ಆರಿಸಿ.

ಉದಾಹರಣೆಗೆ:–ಜನರು,ಸಂಗೀತ, ದೂರದರ್ಶನ,ಇತ್ಯಾದಿಗಳಂತಹ ಗೊಂದಲಗಳಿಲ್ಲದ ಸ್ಥಳದಲ್ಲಿ ಅಧ್ಯಯನ ಮಾಡಲು ಪ್ರಯತ್ನಿಸಿ.

ನೆನಪಿನ ಶಕ್ತಿಯನ್ನು ಹೇಗೆ ಸುಧಾರಿಸುವುದು ಎಂಬುದನ್ನು ಅರ್ಥಮಾಡಿಕೊಳ್ಳಲು ಹೆಣಗಾಡುತ್ತಿರುವ ವಿದ್ಯಾರ್ಥಿಗಳಿಗೆ ಇದು ಉತ್ತಮ ಮಾರ್ಗಗಳಲ್ಲಿ ಒಂದು.

### 5. ಧ್ಯಾನ

ನಿಯಮಿತ ಧ್ಯಾನವು ಮೆದುಳಿಗೆ ರಕ್ತದ ಹರಿವನ್ನು ಸುಧಾರಿಸುತ್ತದೆ, ರಕ್ತನಾಳಗಳ ಬಲವಾದ ಜಾಲಕ್ಕೆ ಕಾರಣವಾಗುತ್ತದೆ ಮತ್ತು ಮೆಮೊರಿ ಸಾಮರ್ಥ್ಯವನ್ನು ಬಲಪಡಿಸುತ್ತದೆ, ಇದರಿಂದಾಗಿ ಮೆಮೊರಿ ಮತ್ತು ಏಕಾಗ್ರತೆಯನ್ನು ಹೇಗೆ ಸುಧಾರಿಸುವುದು ಎಂಬ ಹೋರಾಟದಲ್ಲಿ ನಮಗೆ ಸಹಾಯ ಮಾಡುತ್ತದೆ. ಇದು ಗಮನ, ಏಕಾಗ್ರತೆ, ಸ್ಮರಣೆಯಂತಹ ಅರಿವಿನ ಕಾರ್ಯಗಳನ್ನು ಸುಧಾರಿಸಲು ಸಹಾಯ ಮಾಡುತ್ತದೆ ಮತ್ತು ಒತ್ತಡದ ಮಟ್ಟವನ್ನು ಕಡಿಮೆ ಮಾಡುತ್ತದೆ.

ಉದಾಹರಣೆಗೆ:–10 ನಿಮಿಷಗಳ ಕಾಲ ಗೋಡೆಯ ಮೇಲೆ ಒಂದು ಹಂತದಲ್ಲಿ ಕೇಂದ್ರೀಕರಿಸಲು ಪ್ರಯತ್ನಿಸಿ ಮತ್ತು ವ್ಯತ್ಯಾಸವನ್ನು ನೀವೇ ಗಮನಿಸಿ. ಅಭ್ಯಾಸ ಮತ್ತು ಒಟ್ಟಾರೆ ಆರೋಗ್ಯಕರ ಅಭ್ಯಾಸಗಳೊಂದಿಗೆ ಸ್ಮರಣೆಯನ್ನು ಸುಧಾರಿಸಬಹುದು.

### 6. ಇಂಟರ್ನೆಟ್ ಬಳಕೆ ಮಿತಿಗೊಳಿಸಿ

ಈ ದಿನಗಳಲ್ಲಿ ನಾವು ಜನಪ್ರಿಯ ಸರ್ಚ್ ಇಂಜಿನ್‌ಗಳು ಅಥವಾ ಗ್ಯಾಜೆಟ್‌ಗಳ ಮೇಲೆ ಹೆಚ್ಚು ಅವಲಂಬಿತರಾಗಿದ್ದೇವೆ, ಇದು ದುರದೃಷ್ಟವಶಾತ್ ನಮ್ಮನ್ನು "ಮಾನಸಿಕವಾಗಿ ಸೋಮಾರಿ"ಯನ್ನಾಗಿ ಮಾಡಿದೆ. ನೀವು ಲೆಕ್ಕ ಹಾಕಬೇಕಾದರೆ,ತಕ್ಷಣ ನಿಮ್ಮ ಫೋನ್‌ನಲ್ಲಿ ಕ್ಯಾಲ್ಕುಲೇಟರ್ ತೆರೆಯುತ್ತೀರಿ ಅಥವಾ ಯಾವುದೇ ಮಾಹಿತಿ ಅಗತ್ಯವಿದ್ದರೆ ನೀವು ತಕ್ಷಣ ಅದನ್ನು ಗೂಗಲ್‌ನಲ್ಲಿ ನೋಡುತ್ತೀರಿ.

ನಿಮ್ಮ ಫೋನ್ ನೀವು ತಲುಪುವ ಮೊದಲು,ಮಾಹಿತಿಯನ್ನು ಪಡೆಯಲು ಮೆದುಳನ್ನು ಬಳಸುವ ಮೊದಲ ಪ್ರಯತ್ನವನ್ನು ಮಾಡಿ.

### 7. ನಿಮ್ಮ ಎಲ್ಲಾ ಇಂದ್ರಿಯಗಳನ್ನು ಬಳಸಿ

ಮಾಹಿತಿಯನ್ನು ಉಳಿಸಿಕೊಳ್ಳಲು ಸಹಾಯ ಮಾಡಲು ಕೇವಲ ಒಂದು ಇಂದ್ರಿಯವನ್ನು ಅವಲಂಬಿಸಬೇಡಿ, ಸಾಧ್ಯವಾದಷ್ಟು ಹೆಚ್ಚಿನ ಇಂದ್ರಿಯಗಳನ್ನು ಒಳಗೊಂಡಿರುತ್ತದೆ. ಬಣ್ಣಗಳು,ವಾಸನೆಗಳು, ಅಭಿರುಚಿಗಳಿಗೆ ಮಾಹಿತಿಯನ್ನು ಸಂಯೋಜಿಸಲು ಪ್ರಯತ್ನಿಸಿ.

ಉದಾಹರಣೆಗೆ:–ನೀವು ದೃಶ್ಯ ಕಲಿಯುವವರಾಗಿದ್ದರೆ – ನಿಮ್ಮ ಕೈಯಲ್ಲಿ ಪುಸ್ತಕವನ್ನು ಹಿಡಿದುಕೊಳ್ಳಿ,ನೀವು ನೆನಪಿಟ್ಟುಕೊಳ್ಳಲು ಬಯಸುವದನ್ನು ಜೋರಾಗಿ ಓದಿ,ನೀವು ಅದನ್ನು ಲಯಬದ್ಧವಾಗಿ ಪಠಿಸಬಹುದು ಮತ್ತು ನಂತರ ರಾತ್ರಿ ಮಾಹಿತಿಯನ್ನು ಹಿಂಪಡೆಯಲು ಪ್ರಯತ್ನಿಸಬಹುದು.

### 8. ಆರೋಗ್ಯಕರ ಆಹಾರ

ನಿಮ್ಮ ದೇಹಕ್ಕೆ ಹೇಗೆ ಇಂಧನ ಮತ್ತು ಶಕ್ತಿಯ ಅಗತ್ಯವಿದೆಯೋ ಹಾಗೆಯೇ ಮಾನವನ ಮೆದುಳಿಗೆ ಅಗತ್ಯ. ಜಂಕ್ ಫುಡ್ ಬದಲಿಗೆ ಮನೆಯಲ್ಲಿ ತಯಾರಿಸಿದ ಆಹಾರವನ್ನು ಸೇವಿಸಲು ಆದ್ಯತೆ ನೀಡಿ. ಹಸಿರೆಲೆತರಕಾರಿಗಳು, ಹಣ್ಣುಗಳು,ಧಾನ್ಯಗಳು,ಗೋಡಂಬಿ, ಸಾಲ್ಮನ್ ಮೀನು ಮುಂತಾದ ಒಮೆಗಾ–3 ಕೊಬ್ಬಿನಾಮ್ಲಗಳಂತಹ ಸಸ್ಯ ಆಧಾರಿತ ಆಹಾರವನ್ನು ಸೇವಿಸಿ. ಸಕ್ಕರೆ,ಸಂಸ್ಕರಿಸಿದ ಆಹಾರಗಳು, ಎಣ್ಣೆಯುಕ್ತ ಕರಿದ ಆಹಾರಗಳು, ಕೆಂಪು ಮುಂತಾದ ಸಂಸ್ಕರಿಸಿದ ಆಹಾರ ಪದಾರ್ಥಗಳಿಂದ ದೂರವಿರಿ ಮಾಂಸ,ಚೀಸ್,ಇತ್ಯಾದಿ.

ಆರೋಗ್ಯಕರ ಆಹಾರವು ವಿವಿಧ ಕಾಯಿಲೆಗಳು ಮತ್ತು ದೇಹದ ಕೊಬ್ಬಿನ ಅಪಾಯವನ್ನು ಕಡಿಮೆ ಮಾಡಿ ಸ್ಮರಣೆಯನ್ನು ಸುಧಾರಿಸುವ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ.

### 9. ಚೆನ್ನಾಗಿ ನಿದ್ದೆ ಮಾಡಿ

ಒಟ್ಟಾರೆ ಮೆದುಳಿನ ಆರೋಗ್ಯಕ್ಕೆ ನಿದ್ರೆ ಅತ್ಯಗತ್ಯ ನಿಯಮಿತ ನಿದ್ರಾ ವೇಳಾಪಟ್ಟಿ ಪಾಲಿಸಿ. ವಾರಾಂತ್ಯದಲ್ಲಿ ನಿಮ್ಮ ನಿದ್ರೆಯ ಚಕ್ರ ಮತ್ತು ದಿನಚರಿಯನ್ನು ಮುರಿಯದಿರಲು ಪ್ರಯತ್ನಿಸಿ. 7–8 ಗಂಟೆಗಳ ರಾತ್ರಿ ನಿದ್ರೆ ಉತ್ತಮ ಇದು ಮೆದುಳಿಗೆ ನೆನಪುಗಳನ್ನು ರಚಿಸಲು ಮತ್ತು ದೀರ್ಘಕಾಲದವರೆಗೆ ಸಂಗ್ರಹಿಸಲು ಸಹಾಯ ಮಾಡುತ್ತದೆ. ಮಲಗುವ ಸಮಯಕ್ಕೆ ಸರಿಸುಮಾರು ಒಂದು ಗಂಟೆ ಮೊದಲು ಪ್ರಕಾಶಮಾನವಾದ ಪರದೆಗಳನ್ನು (ಲ್ಯಾಪ್‌ಟಾಪ್, ಕಂಪ್ಯೂಟರ್, ಫೋನ್) ತಪ್ಪಿಸಿ ಮತ್ತು ನಿಮ್ಮ ಮೆದುಳಿಗೆ ವಿಶ್ರಾಂತಿ ಪಡೆಯಲು ಅವಕಾಶ ಮಾಡಿಕೊಡಿ.

### 10. ಜ್ಞಾಪಕಶಾಸ್ತ್ರ

ಇದು ಸ್ಮರಣೆಯನ್ನು ಸುಧಾರಿಸುವ ತಂತ್ರವಾಗಿದೆ ನೀವು ನೆನಪಿಡಲು ಬಯಸುವ ಮಾಹಿತಿಯನ್ನು ದೃಶ್ಯ ಚಿತ್ರ,ವಾಕ್ಯ ಅಥವಾ ಪದದೊಂದಿಗೆ ಲಿಂಕ್ ಮಾಡುವ ಮೂಲಕ ನೀವು ಏನನ್ನಾದರೂ ನೆನಪಿಟ್ಟುಕೊಳ್ಳಲು ಸಹಾಯ ಮಾಡುವ ಸುಳಿವುಗಳಾಗಿವೆ.

ಮಳೆಬಿಲ್ಲಿನ ಬಣ್ಣಗಳನ್ನು ನೆನಪಿಟ್ಟುಕೊಳ್ಳಲು ನಾವೆಲ್ಲರೂ ಈ ಜ್ಞಾಪಕವನ್ನು ಬಳಸಿದ್ದೇವೆ –ಆಂಗ್ಲ ಪದ ವಿಬ್ಗಯಾರ್ (ನೇರಳೆ, ಇಂಡಿಗೊ, ನೀಲಿ,ಹಸಿರು, ಹಳದಿ,ಕಿತ್ತಳೆ, ಕೆಂಪು). ಜ್ಞಾಪಕಶಾಸ್ತ್ರವನ್ನು ಈ ಕೆಳಗಿನ ಪರ್ಯಾಯ ರೂಪಗಳಲ್ಲಿಯೂ ಬಳಸಬಹುದು: ಮೆಮೊರಿ ಸುಧಾರಿಸುವುದು ಹೇಗೆ: ಜ್ಞಾಪಕಶಾಸ್ತ್ರ– ದೃಶ್ಯ ಚಿತ್ರಣ–ವಾಸ್ತವಿಕ ಮಾನಸಿಕ ಚಿತ್ರಗಳೊಂದಿಗೆ ಸಂಬಂಧಿಸಿದ ಮಾಹಿತಿಯನ್ನು ನೆನಪಿಟ್ಟುಕೊಳ್ಳುವುದು ಸುಲಭ.

ಉದಾಹರಣೆಗೆ:–ನೀವು ಬಿಳಿ "ನೆಹರು ಕ್ಯಾಪ್" ಅನ್ನು ನೋಡಿದಾಗ ನೀವು ತಕ್ಷಣವೇ ಭಾರತದ ಮೊದಲ ಪ್ರಧಾನಿಯಾಗಿದ್ದ ಜವಾಹರ್ ಲಾಲ್ ನೆಹರು ಅವರನ್ನು ನೆನಪಿಸಿಕೊಳ್ಳುತ್ತೀರಿ.

ಮೆಮೊರಿಯನ್ನು ಹೇಗೆ ಸುಧಾರಿಸುವುದು: ಜ್ಞಾಪಕಶಾಸ್ತ್ರ– ಚಂಕಿಂಗ್–ಚಂಕಿಂಗ್ ಮಾಹಿತಿಯ ದೀರ್ಘ ಪಟ್ಟಿಯನ್ನು ಒಡೆಯುತ್ತದೆ, ಸಂಖ್ಯೆಗಳನ್ನು ಚಿಕ್ಕದಾದ,ಹೆಚ್ಚು ನಿರ್ವಹಿಸಬಹುದಾದ ಗುಂಪುಗಳಾಗಿ ವಿಂಗಡಿಸುತ್ತದೆ.

ಉದಾಹರಣೆ:–ಒಂದು ದೀರ್ಘ ಸಂಖ್ಯೆಯ(3125178842) ಬದಲಿಗೆ ಮೂರು ಪ್ರತ್ಯೇಕ ಭಾಗಗಳಾಗಿ (ಉದಾ–312– 517 – 8842) ವಿಭಜಿಸಿದಾಗ 10–ಅಂಕಿಯ ಫೋನ್ ಸಂಖ್ಯೆಯನ್ನು ನೆನಪಿಟ್ಟುಕೊಳ್ಳುವುದು ತುಂಬಾ ಸುಲಭವಾಗುತ್ತದೆ.

### 11. ಪೂರ್ವಾಭ್ಯಾಸ

ಕಲಿತ ಹೊಸ ಮಾಹಿತಿಯನ್ನು ಪುನರಾವರ್ತಿಸಿದರೆ ನೀವು ಮಾನಸಿಕವಾಗಿ ರೆಕಾರ್ಡ್ ಮಾಡುವ ಸಾಧ್ಯತೆ ಹೆಚ್ಚು. ನರಕೋಶಗಳ ನಡುವೆ ನೀವು ರಚಿಸುವ ಸಂಪರ್ಕಗಳನ್ನು ಬಲಪಡಿಸುವಲ್ಲಿ ಪುನರಾವರ್ತನೆ ಸಹಾಯ ಮಾಡುತ್ತದೆ. ಪುನರಾವರ್ತಿತ ಅಧ್ಯಯನಕ್ಕಿಂತ ಉತ್ತಮವಾದ ಮಾಹಿತಿಯನ್ನು ಹಿಂಪಡೆಯುವ ಮೂಲಕ ನೀವು ನಿಮ್ಮನ್ನು ಪರೀಕ್ಷಿಸಿಕೊಳ್ಳಬಹುದು. ಮೆಮೊರಿ ಮತ್ತು ಏಕಾಗ್ರತೆಯನ್ನು ಹೇಗೆ ಸುಧಾರಿಸುವುದು ಎಂದು ಉತ್ತರಿಸಲು ಇದು ಖಂಡಿತವಾಗಿಯೂ ನಿಮಗೆ ಸಹಾಯ ಮಾಡುತ್ತದೆ.

ಉದಾಹರಣೆಗೆ:–ವಾಕ್ಯಗಳನ್ನು ಬರೆಯಿರಿ,ಅವುಗಳನ್ನು ಜೋರಾಗಿ ಓದಿ ಮತ್ತು ಪುನರಾವರ್ತಿಸಿ.ನೀವು ಈಗ ಅಧ್ಯಯನ ಮಾಡಿದ್ದನ್ನು ಹಿಂತಿರುಗಿ ಮತ್ತು ಶೀರ್ಷಿಕೆಗಳನ್ನು ನೆನಪಿಸಿಕೊಳ್ಳಿ. ಪ್ರತಿ ಶೀರ್ಷಿಕೆಯ ಅಡಿಯಲ್ಲಿ ಏನಿದೆ ಎಂದು ನಿಮ್ಮನ್ನು ಕೇಳುವ ಮೂಲಕ ಹಿಂಪಡೆಯಿರಿ.

### 12. ಒತ್ತಡವನ್ನು ನಿರ್ವಹಿಸುವುದು

ಒತ್ತಡವು ಮಾನವನ ಕೆಟ್ಟ ಶತ್ರು ಇದು ಕಾರ್ಟಿಸೋಲ್‌ನಂತಹ ಒತ್ತಡದ ಹಾರ್ಮೋನ್‌ಗಳನ್ನು ದೇಹದಲ್ಲಿ ಬಿಡುಗಡೆ ಮಾಡಿ ಮೆದುಳಿನ ಮೆಮೊರಿ ಪ್ರಕ್ರಿಯೆಯನ್ನು ದುರ್ಬಲಗೊಳಿಸುತ್ತದೆ.

ವ್ಯಾಯಾಮವು ಮೆದುಳಿನ ರಾಸಾಯನಿಕಗಳ ಮೇಲೆ ಪರಿಣಾಮ ಬೀರುವ ಪ್ರಮುಖ ಅಂಶವಾಗಿದೆ ಮತ್ತು ಒತ್ತಡದ ಹಾರ್ಮೋನುಗಳನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ ಇದು ಸರಳ ಪರಿಣಾಮಕಾರಿ ಮಾರ್ಗಗಳಲ್ಲಿ ಒಂದು. ಮೇಲ್ಕಂಡ ಅಂಶಗಳು ಸಹಕಾರಿ ಅನುಸರಿಸಿ ಲಾಭ ಪಡೆಯಬಹುದಾಗಿದೆ.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು:**
**ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ–ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
– ಜಾಹೀರಾತು ವ್ಯವಸ್ಥಾಪಕರು.

# ಬಾಳೊಂದು ಚದುರಂಗ

ನಮ್ಮ ಬಾಳು ನಮ್ಮ ಬಾಳ್ವೆ ಚದುರಂಗದ ಆಟವಿದ್ದಂತೆ. ಇದು ಬಾಯ್ಮಾತಿನಲ್ಲಿ ಜನರು ಹೇಳಿರಬಹುದಾದ ಉಪಮೆ ಎಂದು ಕೊಂಡರೂ ವಿಶ್ಲೇಷಿಸಿದಾಗ ಬಹಳ ಅರ್ಥಗರ್ಭಿತ ಎಂದೆನಿಸುವುದು ಸುಳ್ಳಲ್ಲ. ಜಗತ್ತಿನಲ್ಲಿ ಎಲ್ಲರೂ ಆ ಭಗವಂತನು ಆಡುತ್ತಿರುವ ಚದುರಂಗದ ಕಾಯಿಗಳಷ್ಟೇ ಎಂದು ಹಲವು ಶಾಸ್ತ್ರಗಳೆ ಹೇಳಿವೆ.

ನಾವು ಚದುರಂಗದ ಆಟವನ್ನು ಆಡುವಾಗ ಅನುಭವಿಸುವ ಎಲ್ಲಾ ಭಾವನೆಗಳೂ ಬದುಕಿನಲ್ಲಿ ಒಂದು ತೆರನಾಗಿ ಅನುಭವಿ ಸುತ್ತೇವೆ. ಚದು ರಂಗದ ಉದ್ದೇಶವೇ ತನ್ನ ರಾಜನನ್ನು ಸಂರಕ್ಷಿಸುವುದು ಹಾಗೂ ನಿಧಾನವಾಗಿ ಎದುರಾಳಿಯ ಬಲಗುಂದಿಸಿ ರಾಜನನ್ನು ತಮ್ಮ ಚದುರಂಗ ಬಲ ಅಂದರೆ ರಾಣಿ ಅಥವಾ ಮಂತ್ರಿ, ಪೇದೆ, ಆನೆ, ಕುದುರೆ, ಒಂಟೆ ಹೀಗೆ ಸಮಸ್ತ ಬಲದೊಂದಿಗೆ ಕಟ್ಟಿಹಾಕಿ ವಿಜಯ ಸಂಪಾದಿಸುವುದು.



ಚೇತನ ಭಾರ್ಗವ
ಬೆಂಗಳೂರು ಹವ್ಯಾಸಿ ಬರಹಗಾರ್ತಿ

Scan For Digital Colourful
HAMPI TIMES E-paper

ವಾಸ್ತವಿಕವಾಗಿ ನೋಡಿದರೆ ನಮ್ಮ ಜೀವನದಲ್ಲಿ ನಡೆಯುತ್ತಿರುವುದೂ ನಾವು ನಡೆಸಲು ಇಚ್ಚಿಸುವುದೂ ಇದನ್ನೇ.



ಅವರವರ ವ್ಯಾಪ್ತಿಯಲ್ಲಿ ಬುದ್ಧಿಮತ್ತೆಯಲ್ಲಿ ನಾವು ಹಣ , ಕೀರ್ತಿ, ಹೆಸರು ಸಂಪಾದನೆಗೆ ಹೊರಡುತ್ತೇವೆ. ಇದು ವಿಜಯದ ಸಂಕೇತ. ಇದರ ಹಾದಿಯಲ್ಲಿ ನಮ್ಮ ಎಲ್ಲ ಬಲವನ್ನೂ ಮೀಸಲಿಡುತ್ತೇವೆ. ನಮ್ಮ ಹೆಸರು, ಮಾನ ಮರ್ಯಾದೆ, ಅಸ್ತಿತ್ವಕ್ಕೆ ಧಕ್ಕೆ ಬರದಂತೆ ಹೆಜ್ಜೆ ಹಾಕುತ್ತೇವೆ. ಎಲ್ಲ ಸರಿಯಾದರೆ ತಕ್ಕ ಮಟ್ಟಿಗೆ ಅದನ್ನು ಸಂಪಾದಿಸಿ ಗೆದ್ದೇವೆಂದು ಬೀಗುತ್ತೇವೆ.

ಆದರೆ ಈ ಬದುಕು ಚದುರಂಗದಾಟ. ನಮ್ಮ ಪ್ರತಿಯೊಂದು ಹೆಜ್ಜೆಗೆ ಎದುರಾಳಿಯ ಪ್ರತಿಯಾದ ನಡೆ ಸಿದ್ದವಿರುತ್ತದೆ. ಇದನ್ನು ಅರಿತು ಊಹಿಸಿ ನಾವು ಮುನ್ನಡೆಯಬೇಕು. ಈ ಜೀವನದಲ್ಲಿ ಚದುರಂಗದ ನಿಯಮಗಳಂತೆ ಸೀದಾ ವೈರಿಗಳು ತೋರುವುದಿಲ್ಲ. ಅದು ನಮ್ಮ ನಮ್ಮವರಲ್ಲೇ ಅಥವಾ ನಮ್ಮ ಸಮೀಪದವರಲ್ಲೇ ಕೊನೆಗೆ ನಮ್ಮ ಮನದಲ್ಲೇ ಮನೆ ಮಾಡಿರಬಹುದು. ಇದನ್ನೆಲ್ಲ ಊಹಿಸಿ, ಗುರುತಿಸಿ ನಮ್ಮ ಹಾಗೂ ನಮ್ಮವರ ಒಳಿತಿಗೆ ಕಾರ್ಯವನ್ನು ಸಾಧಿಸಬೇಕು. ಪರರಿಗೆ ಉಪಕಾರವಾಗುವಂತೆ ಬಾಳಬೇಕು. ಆದರೆ ಇಲ್ಲಿ ಎದುರಾಳಿಗಳು ನಮ್ಮವರಂತೆ ಕಾಣುವ ಮನುಷ್ಯರಷ್ಟೇ ಅಲ್ಲ, ನಮ್ಮನ್ನಾಳುವ ಅರಿಷಡ್ವರ್ಗಗಳು, ಕಾಡುವ ಸಂಶಯ, ವಿಶ್ವಾಸದ ಕೊರತೆ, ಕರ್ಮದ ಗತಿ, ಬದುಕಿನ ತಿರುವುಗಳು, ಹತ್ತಿರದವರೇ ಮಾಡುವ ಮೋಸ, ನಂಬಿಕೆ ದ್ರೋಹ ಅಲ್ಲದೆ ಪ್ರಾಣಕ್ಕೆ ಸಂಚಕಾರ ತಂದೊಡ್ಡುವ ಪ್ರಸಂಗ ಹೀಗೆ ಬದುಕಿನ ಪ್ರತಿಯೊಂದು ನಡೆಯೂ ಸಂಕೀರ್ಣವಾದ ಅರಿಯಲು ಆಗದ ಚದುರಂಗದಾಟವೇ. ಇದರ ಸೂತ್ರಧಾರ ಕೈಯಲ್ಲಿ ಕಾಯಿಗಳಂತೆ ನಮ್ಮ ಪ್ರತಿಯೊಂದು ನಡೆಯೂ ನಡೆಯುತ್ತಿದೆ. ಅದರ ಪರಿಣಾಮ ಏನೇ ಇರಬಹುದು, ಆದರೆ ಆಟ ಆಡುವಾಗ ಮಾತ್ರ ಪೂರ್ಣ ವಿವೇಚನೆಯಿಂದ ಮಗ್ನವಾಗಿ ಆಡುವುದು ನಮ್ಮ ಕರ್ತವ್ಯ. ನಮ್ಮ ವ್ಯಾಪ್ತಿ ಸಣ್ಣದಾದ ಪೇದೆಯದೆ ಇರಬಹುದು ಅಥವಾ ರಾಜನದೇ ಇರಬಹುದು ಆದರೆ ನಮ್ಮ ನಡೆ ಮಾತ್ರ ವಿಚಲಿತವಾಗದೆ ಕಾರ್ಯತಂತ್ರಕ್ಕೊಳಪಟ್ಟು ನಡೆಸುವುದು ಅಗತ್ಯ ಹಾಗೂ ಇಲ್ಲಿಯ ನಿಯಮ ಕೂಡ ಹೌದು.

ಹೀಗಾಗಿ ಬಾಳೆಂಬ ಚದುರಂಗದಾಟದಲ್ಲಿ ಕಾಯಿಗಳೆ ಆದರೂ ನಮ್ಮ ನಡೆ ವಿವೇಚನಾಯುಕ್ತವಾಗಿರಲಿ. ಸೋಲು ಗೆಲುವು ಸಾವು ನೋವು ತ್ಯಾಗ ಗೆಲುವು ಹೀಗೆ ಏನೇ ಇದ್ದರೂ ಕೊನೆಯವರೆಗೂ ಆಟ ಸಾಗುವ ಈ ಬದುಕಿನ ಚದುರಂಗದಲ್ಲಿ ನಮ್ಮ ಕಾಯಿಯ ಪಾತ್ರ ಚೆನ್ನಾಗಿ ನಿರ್ವಹಿಸೋಣ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

## ಕವಿ ಮನಸು

### ಮನೆಯ ಜ್ಯೋತಿ

ಬಾಳನು ಬೆಳಗುವ ಬಾಲೆಯು ಬಂದಳು
ಹೋಲಿಸಲಿಲ್ಲ ಚೆಲುವನ್ನು
ಮೇಲಿನ ದೇವನು ತಾಳಿದ ಕರುಣೆಯ
ಕೇಳಿದ ವರವ ನೀಡಿದನು

ರುಬ್ಬುವ ಕಲ್ಲಲಿ ರುಬ್ಬಲು ಕುಳಿತರೆ
ತಬ್ಬಲು ಬಳಿಗೆ ಬರುತಿಹಳು
ಹುಬ್ಬನು ಕುಣಿಸುತ ಹಬ್ಬಿಸಿ ಸಂತಸ
ಅಬ್ಬೆಯ ಕರವನು ಹಿಡಿಯುವಳು

ತಮವನು ಕಳೆಯುವ ನಮಗಿಹ
ಹಣತೆಯು
ಮಮತೆಯ ಸಿರಿಯು ಈ ಕುವರಿ
ಅಮಲನು ಏರಿಪ ಸುಮಧುರ ಕಂಠದ
ಸುಮನಸ ಚೆಲುವೆ ಸುಕುಮಾರಿ

ತಾತನ ನಗಿಸುವ ಮಾತಿನ ಮಲ್ಲಿಯು
ಸೋತಿಹೆವೆಲ್ಲ ಕಂದನಿಗೆ
ಕಾತರ ತುಂಬಿದ ನೇತ್ರದಿ ಕಾಂತಿಯು
ಜ್ಯೋತಿಯು ಈಕೆ ಈ ಮನೆಗೆ॥

ಪೆರ್ಮುಖ ಸುಬ್ರಹ್ಮಣ್ಯ ಭಟ್

### ಆಸರೆ

ಛಳಿ ಬಂದರೆ,
ಬೆಂಕಿಯ ಆಸರೆ.,
ಬೇಸಿಗೆ ಬಂದರೆ.,
ಮರದ ಆಸರೆ.,
ಮಳೆ ಬಂದರೆ,
ಕೊಡೆಯ ಆಸರೆ.,
ನೀನಿದ್ದರೆ,
ನನಗಾಸರೆ,
ನನಗೆ ನೀನು,
ನಿನಗೆ ನಾನು.,
ಆಸರೆಯಾದರೆ,
ಚನ್ನ ಈ ಛಳಿಯಲಿ!!

– ಚಂದ್ರಶೇಖರಯ್ಯ ರೋಣದಮಠ.

### ನಿತ್ಯ ಪಂಚಾಂಗ

ಮಾಸ: ಮಾರ್ಗಶೀರ । ಸಂವತ್ಸರ: ಕ್ರೋಧಿ

03–12–2024 – ಮಂಗಳವಾರ

| | |
|---|---|
| ತಿಥಿ | : ದ್ವಿತೀಯ |
| ಪಕ್ಷ | : ಶುಕ್ಲ |
| ನಕ್ಷತ್ರ | : ಮೂಲ |
| ಯೋಗ | : ಶೂಲ |
| ಕರಣ | : ಕೌಳವ |
| ಸೂರ್ಯೋದಯ | : 06:54:13 |
| ಸೂರ್ಯಾಸ್ತ | : 17:39:31 |
| ರಾಹು ಕಾಲ | : 14:58–16:19 |
| ಯಮಘಂಡ ಕಾಲ | : 09:36–10:56 |
| ಗುಳಿಕ ಕಾಲ | : 12:17–13:38 |

### ತುಂಗಭದ್ರಾ ನೀರಿನ ಮಟ್ಟ



ಸೋಮವಾರ : 02–12–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1629.72 ಅಡಿ |
| ಒಳ ಹರಿವು | 2860 ಕ್ಯುಸೆಕ್ |
| ಹೊರ ಹರಿವು | 5563 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 93.018 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1592.70 ಅಡಿ |
| ಒಳ ಹರಿವು | 768 ಕ್ಯುಸೆಕ್ |
| ಹೊರ ಹರಿವು | 3322 ಕ್ಯುಸೆಕ್ |
| ಸಾಮರ್ಥ್ಯ | 13.434 ಟಿಎಂಸಿ |

## ಗ್ರಾಮದ ಮನೆ ಮನೆಯಿಂದಲೂ ಹಸಿ, ಒಣ ಕಸ ಸಂಗ್ರಹ | ತ್ಯಾಜ್ಯ ವಿಂಗಡನೆ ಘಟಕದಲ್ಲಿ ಕಸದ ರಾಶಿ

# ಗ್ರಾಮದೊಳಗೆ ನೈರ್ಮಲ್ಯಕ್ಕೆ ಲಕ್ಷ್ಯ, ಹೊರಗೆ ಅಲಕ್ಷ್ಯ

■ ಮಾರೇಶ ತಿಪ್ಪೇಹಳ್ಳಿ ಕೂಡ್ಲಿಗಿ

ತಾಲೂಕಿನ ಕಾನಹೊಸಹಳ್ಳಿಯಲ್ಲಿ ಸ್ವಚ್ಛತಾ ಜಾಗೃತಿ ಮೂಡಿಸುತ್ತಿರುವ ಕಸಸಂಗ್ರಹ ವಾಹನ ಮನೆ ಮನೆ ಬಾಗಿಲಿಗೆ ತೆರಳಿ ಕಸ ಸಂಗ್ರಹಿಸುವ ಮೂಲಕ ಸ್ವಚ್ಛತೆಗೆ ಆದ್ಯತೆ ನೀಡಿದೆ. ಆದರೆ ಸಂಗ್ರಹಿಸಿದ ಕಸವನ್ನು ಊರ ಹೊರಗಿನ ತ್ಯಾಜ್ಯ ವಿಂಗಡನ ಘಟಕದಲ್ಲಿ ಸುರಿಯುತ್ತಿದ್ದು, ಕಾರ್ಮಿಕರ ಕೊರತೆಯಿಂದ ಕಸ ವಿಂಗಡನೆಗೆ ಗ್ರಹಣ ಆವರಿಸಿದೆ. ನಿರ್ವಹಣೆ ವೈಫಲ್ಯದಿಂದ ತ್ಯಾಜ್ಯ ವಿಂಗಡನೆ ಘಟಕದ ಸುತ್ತಮುತ್ತ ಹೊರಸೂಸುವ ದುರ್ನಾತದಿಂದ ಮತ್ತೆ ಅನೈರ್ಮಲ್ಯದ ಆತಂಕ ಎದುರಾಗಿದೆ.

**ಗ್ರಾಮೀಣ ನೈರ್ಮಲ್ಯತೆ:** ಗ್ರಾಮೀಣ ಭಾಗದಲ್ಲಿ ಸಂಪೂರ್ಣ ನೈರ್ಮಲ್ಯತೆಯನ್ನು ಸಾಧಿಸುವ ದೃಷ್ಟಿಯಿಂದ ಸರ್ಕಾರ ಸ್ವಚ್ಛ ಭಾರತ್ ಯೋಜನೆಯಡಿ ಶ್ರಮಿಸುತ್ತದೆ. ಮೂಲದಲ್ಲಿಯೇ ತ್ಯಾಜ್ಯ ಸೂಕ್ತ ವಿಲೇವಾರಿಗಾಗಿ, ಸ್ವಚ್ಛತಾ ವಾಹಿನಿ ಮೂಲಕ ಮನೆ, ಮನೆಯಿಂದ ಕಸ ಸಂಗ್ರಹಿಸುವ ಮೂಲಕ ಗ್ರಾಮದ ಸ್ವಚ್ಛತೆಗೆ ಆಧ್ಯತೆ ನೀಡಲಾಗುತ್ತಿದೆ. ಘನ ತ್ಯಾಜ್ಯ ವಿಲೇವಾರಿ ಘಟಕಗಳ ಮೂಲಕ ತ್ಯಾಜ್ಯದ ಸೂಕ್ತ ವಿಲೇವಾರಿ ಕೂಡಾ ಮಾಡಲಾಗುತ್ತದೆ. ಗ್ರಾಮದಲ್ಲಿ ನೈರ್ಮಲ್ಯ ಕಾಯ್ದು ಕೊಂಡು, ಜನರ ಜೀವನಮಟ್ಟ ಸುಧಾರಿಸುವ ಮೂಲಕ ಗ್ರಾಮದಲ್ಲಿ ಸುಸ್ಥಿರ ಅಭಿವೃದ್ಧಿಯನ್ನು ಸಾಧಿಸಲು ಸ್ವಚ್ಛ ಭಾರತ್ ಮಿಷನ್(ಗ್ರಾ) ಕೆಲಸ ನಿರ್ವಹಿಸುತ್ತಲಿದೆ. ಇದರಿಂದ ಸಹಜವಾಗಿ ಹೊಸಹಳ್ಳಿ ಪ್ರತಿಯೊಂದು ಬೀದಿಯಲ್ಲಿ ಸ್ವಚ್ಛತೆಯನ್ನು ಕಾಣಬಹುದಾಗಿದೆ. ಸಾರ್ವಜನಿಕರು ಕೂಡಾ ಹಸಿ ಕಸ, ಒಣ ಕಸಗಳನ್ನು ಬೇರ್ಪಡಿಸಿ ಕಸ ವಿಲೇವಾರಿಯ ವಾಹನವನ್ನು ಸಮರ್ಪಕವಾಗಿ ಬಳಸಿಕೊಳ್ಳುತ್ತಿದ್ದು, ಗ್ರಾಮದಲ್ಲಿ ಆರೋಗ್ಯಕರ ವಾತವರಣ ನಿರ್ಮಿಸು ವಲ್ಲಿ ಸಹಕಾರಿಯಾಗಿದೆ.






**ಸಂಕೀರ್ಣ ಘಟಕ ಸ್ಥಗಿತ:** ಹೊಸಹಳ್ಳಿ ಹೊರ ವಲಯದ ಸಿದ್ಧಾಪರದ ಅರಣ್ಯ ಪ್ರದೇಶ ಹತ್ತಿರ ಘನ ತ್ಯಾಜ್ಯ ವಿಲೇವಾರಿ ಘಟಕ ಇದೆ. ಇಲ್ಲಿ ಅಗತ್ಯ ವಾಗಿ ಕಸ ಮರುವಿಂಗಡನೆ ಕಾರ್ಯ ನಡೆಯಬೇಕಿದೆ. ಆದರೆ, ಕಳೆದ ಎರಡು ವರ್ಷಗಳಿಂದ ಬೇರ್ಪಡಿಸುವ ಕಾರ್ಯ ಹಾಗೇ, ಉಳಿದಿದೆ. ಇದರಿಂದ ಕಸವನ್ನು ಹಾಗೇ, ವಿಲೇವಾರಿ ಘಟಕದಲ್ಲಿ ಸಂಗ್ರಹಿಸಲಾಗುತ್ತಿದೆ. ಸಂಕೀರ್ಣ ಘಟಕ ಸ್ಥಗಿತ ಕಾರ್ಯ ನಡೆಯುತ್ತಿಲ್ಲ. ಸಿದ್ಧಾಪುರ ಗ್ರಾಮಕ್ಕೆ ಹೋಗುವ ರಸ್ತೆಯಲ್ಲಿ ಅರಣ್ಯ ಪ್ರದೇಶ ಇರುವುದರಿಂದ ಕಾಡು ಪ್ರಾಣಿಗಳ ಹಾವಳಿ ಭೀತಿಗೆ ಕಾರ್ಮಿಕರು ಅದರಲ್ಲೂ ಮಹಿಳಾ ಕಾರ್ಮಿಕರು ಕೆಲಸಕ್ಕೆ ತೆರಳಲು ನಿರಾಕರಿ ಸುತ್ತಿರುವುದು ಇದೀಗ ಸಮಸ್ಯೆಯಾಗಿದೆ ಎನ್ನು ತ್ತಾರೆ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ.

ಸರ್ಕಾರದ ಜನಪರ ಯೋಜನೆಗಳನ್ನು ಲಕ್ಷಾಂತರ ವೆಚ್ಚದಲ್ಲಿ ಜಾರಿಗೊಳಿಸಿ ನಿರ್ಮಿಸಿದ ಬಳಿಕ ಅದರ ನಿರ್ವಹಣೆ ಮರೆತರೆ ಪ್ರಯೋಜನವಿಲ್ಲದಂತಾಗುತ್ತದೆ. ಸಂಬಂಧಿಸಿದ ಅಧಿಕಾರಿ ಗಳು ಇತ್ತಕಡೆ ಗಮನಹರಿಸಿ ಸೂಕ್ತ ಕಾಂಪೌಂಡ್, ಭದ್ರತೆ ಒದಗಿಸುವ ಮೂಲಕ ತ್ಯಾಜ್ಯ ವಿಂಗಡನೆಗೆ ಆದ್ಯತೆ ನೀಡಿದಲ್ಲಿ, ಕೆಲ ಕಾರ್ಮಿಕರಿಗೆ ಕೆಲಸ ನೀಡಿದಂತಾಗುತ್ತದೆ. ಸರ್ಕಾರದ ಯೋಜನೆಯನ್ನು ಅನುಷ್ಠಾನ, ಸಮರ್ಪಕ ನಿರ್ವಹಣೆಯಿಂದ ಮಾಡುವುದರಿಂದ ಗ್ರಾಮ ಪಂಚಾಯಿತಿಗೂ ಆದಾಯ ಹೆಚ್ಚಾಗಲಿದೆ ಎನ್ನುತ್ತಾರೆ ಗ್ರಾಮಸ್ಥರು.

ತ್ಯಾಜ್ಯ ಸಂಕೀರ್ಣ ಘಟಕವಿದ್ದರೂ, ಉಪಯೋಗ ಇಲ್ಲದಂತಾಗಿದೆ ಎಂದೂ ಗ್ರಾಮಸ್ಥರು ದೂರುತ್ತಿದ್ದಾರೆ. ಸಂಬಂಧಿಸಿದ ಅಧಿಕಾರಿಗಳು ಕಾರ್ಮಿಕರ ಕೊರತೆಯನ್ನು ನೀಗಿಸುವ ಮೂಲಕ ತ್ಯಾಜ್ಯ ವಿಂಗಡನೆ ಕಾರ್ಯಕ್ಕೆ ಮರುಚಾಲನೆ ನೀಡಬೇಕಿದೆ.

> ಘನ ತ್ಯಾಜ್ಯ ವಿಲೇವಾರಿ ಘಟಕಗಳ ಮೂಲಕ ಸ್ವಚ್ಛತೆ ಆಧ್ಯತೆ ನೀಡಲಾಗುತ್ತಿದೆ. ಆದರೆ, ಕಾನಹೊಸಹಳ್ಳಿಯ ಹೊರವಲಯದ ಸಂಕೀರ್ಣ ಘಟಕದಲ್ಲಿ ತ್ಯಾಜ್ಯ ಬೇರ್ಪಡಿಸುವ ಕಾರ್ಯ ಸ್ಥಗತಿಗೊಂಡಿದ್ದು, ಕಸ ಗುಡ್ಡದಂತಾಗಿದ್ದು, ದುರ್ನಾತ ಬೀರುತ್ತಿದೆ. ಕೂಡಲೇ ಸೂಕ್ತ ಕ್ರಮ ಕೈಗೊಂಡು ಸಮಸ್ಯೆಗೆ ಪರಿಹಾರ ಕಲ್ಪಿಸಬೆಕು.
>
> – ಕರಿಬಸಪ್ಪ, ದ.ಸಂ.ಸ. ಸಂಚಾಲಕ, ಲೋಕಿಕೆರೆ.

> ಮಹಿಳಾ ಸ್ವಸಹಾಯ ಸಂಘದ ಕೆಲ ಸದಸ್ಯರು ತ್ಯಾಜ್ಯ ವಿಂಗಡನಾ ಘಟಕದಲ್ಲಿ ಕೆಲಸ ನಿರ್ವಹಿಸುತ್ತಿದ್ದರು. ಅರಣ್ಯ ಪ್ರದೇಶವಿರುವುದರಿಂದ ಕಾಡು ಪ್ರಾಣಿಗಳ ಆತಂಕದಿಂದ ಕೆಲಸಕ್ಕೆ ಬರಲು ನಿರಾಕರಿಸಿರುವು ದರಿಂದ ತೊಂದರೆಯಾಗಿದೆ. ಶೀಘ್ರವೇ ಕ್ರಮವಹಿಸ ಲಾಗುವುದು.
>
> – ವಿನಯ್ ಕುಮಾರ್, ಪಿಡಿಒ, ಹೊಸಹಳ್ಳಿ.

# ಎಲ್ಲರಿಂದಲೂ ಮಕ್ಕಳ ಹಕ್ಕುಗಳ ರಕ್ಷಣೆಯಾಗಲಿ

## ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೊಸಂಬೆ ಹೇಳಿಕೆ

■ ಹಂಪಿ ಟೈಮ್ಸ್ ಬಳ್ಳಾರಿ

ಕಾನೂನಿನಾತ್ಮಕವಾಗಿರುವ ಮಕ್ಕಳ ಹಕ್ಕುಗಳ ಹಿತ ರಕ್ಷಣೆಗೆ ವಿವಿಧ ಇಲಾಖೆಗಳ ಅಧಿಕಾರಿಗಳು ಒಗ್ಗಟ್ಟಾಗಿ ಕಾರ್ಯ ನಿರ್ವಹಿಸಲು ಪ್ರತಿಯೊಬ್ಬರೂ ಮುಂದಾಗಬೇಕು ಎಂದು ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೊಸಂಬೆ ಅವರು ಹೇಳಿದರು.

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ ಬೆಂಗಳೂರು, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ ಇವರ ಸಂಯುಕ್ತಾಶ್ರಯದಲ್ಲಿ ನಗರದ ಜಿಲ್ಲಾ ಪಂಚಾಯತ್‌ನ ನಜೀರ್ ಸಭಾಂಗಣದಲ್ಲಿ 'ಬಾಲ್ಯವಿವಾಹ, ಪೋಕ್ಸೋ, ಆರ್.ಟಿ.ಐ ಕಾಯ್ದೆ ಹಾಗೂ ಮಕ್ಕಳ ರಕ್ಷಣೆ' ಕುರಿತು ಜಿಲ್ಲಾ, ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಸೋಮವಾರ ಏರ್ಪಡಿಸಿದ್ದ ಒಂದು ದಿನದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಮಕ್ಕಳ ಮೇಲೆ ದೌರ್ಜನ್ಯವಾದಲ್ಲಿ ಬಾಲ್ಯ ವಿವಾಹ ನಿಷೇಧ, ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ, ಪೋಕ್ಸೋ, ಸೇರಿದಂತೆ ಇನ್ನಿತರೆ ಕಾನೂನನಡಿ ಕಠಿಣ ಶಿಕ್ಷೆಯಿದೆ. ಕಳೆದ ಮೂರು ವರ್ಷದಲ್ಲಿ ರಾಜ್ಯದೆಡೆ 10 ಸಾವಿರಕ್ಕೂ ಹೆಚ್ಚು ಪೋಕ್ಸೋ ಪ್ರಕರಣಗಳು ದಾಖಲಾಗಿದ್ದು, 202 ಪ್ರಕರಣಗಳಿಗೆ ಶಿಕ್ಷೆ ಪ್ರಕಟವಾಗಿದೆ. ಈ ನಿಟ್ಟಿನಲ್ಲಿ ಮಕ್ಕಳ ಹಕ್ಕುಗಳ ಹಿತರಕ್ಷಣೆಗೆ ಪ್ರತಿಯೊಬ್ಬರೂ ಅಚ್ಚುಕಟ್ಟಾಗಿ ಕಾರ್ಯ ನಿರ್ವಹಿಸಬೇಕಿದೆ ಎಂದರು.

ಸಮಾಜದ ಪ್ರತಿಯೊಬ್ಬರೂ ಮಕ್ಕಳ ವಿಷಯದಲ್ಲಿ ಅತ್ಯಂತ ಸೂಕ್ಷ್ಮತೆಯನ್ನು ಪ್ರದರ್ಶಿಸಿ, ಸಂವೇದನಾ ಶೀಲತೆ ಉಳಿಸಿಕೊಳ್ಳಬೇಕಿದೆ. ಶಿಶು ಮರಣ, ಹಾಗೂ ತಾಯಿ ಮರಣ ಪ್ರಕರಣಗಳನ್ನು ತಡೆಗಟ್ಟಲು ಸೂಕ್ತ ಕ್ರಮಗಳನ್ನು ಕೈಗೊಳ್ಳುವುದು ಅತ್ಯಂತ ಅಗತ್ಯವಾಗಿದೆ.

ಸುಸ್ಥಿರ ಅಭಿವೃದ್ಧಿ ಗುರಿಯ 17 ಕಾರ್ಯಕ್ರಮಗಳಲ್ಲಿ 9 ಕಾರ್ಯಕ್ರಮಗಳು ಮಕ್ಕಳ ಮತ್ತು ಮಹಿಳೆಯರ ಅಭಿವೃದ್ಧಿಗೆ ಪೂರಕವಾಗಿದ್ದು, ಗ್ರಾಮ ಮಟ್ಟದಿಂದ ಜಿಲ್ಲಾ ಮಟ್ಟದ ಅಧಿಕಾರಿಗಳು ಸೇರಿದಂತೆ ಎಲ್ಲರೂ ಮಕ್ಕಳಪರ ಕಾಳಜಿ ವಹಿಸಿಕೊಂಡು ವ್ಯವಸ್ಥಿತವಾಗಿ ಕೆಲಸ ನಿರ್ವಹಿಸಬೇಕು. ಅಂದಾಗ ಮಾತ್ರ ಸಮಾಜದಲ್ಲಿನ ಅನಿಷ್ಠ ಪದ್ಧತಿ–ಪಿಡುಗು ಹೋಗಲಾಡಿಸುವುದಕ್ಕೆ ಸಾಧ್ಯ ಎಂದು ಅಭಿಪ್ರಾಯಪಟ್ಟರು.



ಅಧಿಕಾರಿಗಳು ಮಕ್ಕಳ ಹಕ್ಕುಗಳ ರಕ್ಷಣೆಗಾಗಿ ಇರುವ ಕಾನೂನು ಕಾಯ್ದೆಗಳ ಮನವರಿಕೆ ಮಾಡಿ ಕೊಳ್ಳಬೇಕು. 18 ವರ್ಷದೊಳಗಿನ ಮಕ್ಕಳು ತಿಳಿದು ಅಥವಾ ತಿಳಿಯದೇ ತಪ್ಪು ಮಾಡಿದ್ದಲ್ಲಿ ಕಠಿಣ, ಅವಮಾನೀಯ ಶಿಕ್ಷೆ ನೀಡಲು ಕಾನೂನಡಿ ಅವಕಾಶವಿರುವುದಿಲ್ಲ ಎಂದರು.

ಜಿಲ್ಲಾ ಕಾನೂನು ಸೇವಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿ ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರೂ ಆದ ರಾಜೇಶ್.ಎನ್ ಹೊಸಮನೆ ಅವರು ಮಾತನಾಡಿ, ಮಕ್ಕಳ ಹಕ್ಕುಗಳಿಗೆ ಧಕ್ಕೆಯಾಗದಂತೆ ಕಾನೂನಾತ್ಮಕಾವಾಗಿ ಕಾಯುವ ಕೆಲಸವನ್ನು ಸರ್ಕಾರ ಹಾಗೂ ಸರ್ಕಾರವನ್ನು ಪ್ರತಿನಿಧಿಸುವ ಸಂಸ್ಥೆಗಳ ಜವಾಬ್ದಾರಿಯಾಗಿರುತ್ತದೆ. ಮಕ್ಕಳ ಹಕ್ಕುಗಳ ಕಾಯ್ದೆಗಳ ಕುರಿತು ಆಯೋಜನೆ ಮಾಡಿ ರುವ ಕಾರ್ಯಾಗಾರದ ಸದುಪಯೋಗ ಪಡೆದು ಕೊಳ್ಳಬೇಕು ಎಂದು ಹೇಳಿದರು.

ಅಧಿಕಾರಿಗಳು ಹಾಗೂ ಪ್ರತಿಯೊಬ್ಬರೂ ನಿಷ್ಠೆಯಿಂದ ಕೆಲಸ ನಿರ್ವಹಿಸುವ ಮೂಲಕ ಬಾಲ್ಯ ವಿವಾಹ, ಪೋಕ್ಸೋ ಕಾಯ್ದೆ, ಶಿಶು ಮರಣ, ಗರ್ಭಿಣಿಯ ಮರಣಗಳ ಪ್ರಕರಣಗಳನ್ನು ಕಡಿಮೆಗೊಳಿಸಲು ಕಾರ್ಯ ಪ್ರವೃತ್ತರಾಗಬೇಕು. ಉತ್ತಮ ಸಮಾಜ ನಿರ್ಮಿಸುವಲ್ಲಿ ಪ್ರತಿಯೊಬ್ಬರೂ ಕೈಜೋಡಿಸಬೇಕು ಎಂದರು.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪನಿರ್ದೇಶಕ ವಿಜಯ್ ಕುಮಾರ್ ಕೆ.ಹೆಚ್ ಅವರು ಮಾತನಾಡಿದರು. ಇದೇ ವೇಳೆ ಮಕ್ಕಳ ಸಹಾಯವಾಣಿ–1098 ಹಾಗೂ ಪೋಕ್ಸೋ ಕಾಯ್ದೆಯ ಭಿತ್ತಿ ಪತ್ರ ಬಿಡುಗಡೆಗೊಳಿಸಲಾಯಿತು. ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿದ್ದ ಕೊಪ್ಪಳದ ಯುನಿಸೆಫ್ ಮಕ್ಕಳ ಸಂರಕ್ಷಣಾ ಯೋಜನೆಯ ಪ್ರಾದೇಶಿಕ ಸಂಯೋಜಕರಾದ ರಾಘವೇಂದ್ರ ಭಟ್ ಅವರು 'ಬಾಲ್ಯವಿವಾಹ, ಪೋಕ್ಸೋ, ಆರ್.ಟಿ.ಇ. ಕಾಯ್ದೆ ಹಾಗೂ ಮಕ್ಕಳ ರಕ್ಷಣೆ' ಕುರಿತು ಉಪನ್ಯಾಸ ನೀಡಿದರು.

ಈ ಸಂದರ್ಭದಲ್ಲಿ ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ರವಿಕುಮಾರ್, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ವೈ.ರಮೇಶ್ ಬಾಬು, ಮಕ್ಕಳ ಕಲ್ಯಾಣ ಸಮಿತಿಯ ಅಧ್ಯಕ್ಷರಾದ ವಿಜಯಲಕ್ಷ್ಮಿ ಮೈದೂರು, ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ ಎಳೆ ನಾಗಪ್ಪ ಸೇರಿದಂತೆ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ವಿವಿಧ ಇಲಾಖೆಯ ಅಧಿಕಾರಿಗಳು, ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ಸಿಬ್ಬಂದಿ, ಸರ್ಕಾರಿ ಮಕ್ಕಳ ಪಾಲನಾ ಸಂಸ್ಥೆಯ ಅಧೀಕ್ಷಕರು ಹಾಗೂ ಇತರರು ಉಪಸ್ಥಿತರಿದ್ದರು.

## ಅಪರ ಸರ್ಕಾರಿ ವಕೀಲರ ಹುದ್ದೆಗೆ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಹೊಸಪೇಟೆ

ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ ಹಿರಿಯ ಶ್ರೇಣಿ ನ್ಯಾಯಾಲಯದ ಅಪರ ಸರ್ಕಾರಿ ವಕೀಲರ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದ್ದು, ಅರ್ಜಿ ಸಲ್ಲಿಸಲು ಡಿಸೆಂಬರ್ 18 ಕೊನೆಯ ದಿನಾಂಕವಾಗಿರುತ್ತದೆ.

ಅಪರ ಸರ್ಕಾರಿ ವಕೀಲರ ಹುದ್ದೆಯನ್ನು ಮೂರು ವರ್ಷಗಳ ಅವಧಿಗೆ ಅಥವಾ ಮುಂದಿನ ಆದೇಶದವರೆಗೆ ಹೊಸದಾಗಿ ನೇಮಕಾತಿ ಮಾಡಲು ಉದ್ದೇಶಿಸಿದ್ದು, 7 ವರ್ಷಗಳ ಕಾಲ ವಕೀಲ ವೃತ್ತಿ ಪೂರೈಸಿದ ಅರ್ಹ ವಕೀಲರು ತಮ್ಮ ಪೂರ್ಣ ಸ್ವವಿವರ ಹಾಗೂ ಸೇವಾ ವಿವರಗಳೊಂದಿಗೆ ನಿಗಧಿತ ನಮೂನೆಯಲ್ಲಿ ಲಿಖಿತ ಅರ್ಜಿಯನ್ನು ದ್ವಿಪ್ರತಿಯಲ್ಲಿ ಜಿಲ್ಲಾಧಿಕಾರಿಗಳ ಕಾರ್ಯಾಲಯಕ್ಕೆ ತಲುಪುವಂತೆ ಖುದ್ದಾಗಿ ಅಥವಾ ಅಂಚೆಯ ಮೂಲಕ ಸಲ್ಲಿಸಬಹುದು. ಡಿಸೆಂಬರ್ 18ರ ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಹೊಸಪೇಟೆ ನಗರ: ಡಿ. 5 ರಂದು ವಿವಿಧೆಡೆ ವಿದ್ಯುತ್ ವ್ಯತ್ಯಯ

■ ಹಂಪಿ ಟೈಮ್ಸ್ ಹೊಸಪೇಟೆ

ಜೆಸ್ಕಾಂ ಹೊಸಪೇಟೆ ನಗರ ಉಪವಿಭಾಗ–1ರ 33/11ಕೆವಿ ವಿದ್ಯುತ್ ವಿತರಣಾ ಕೇಂದ್ರದಲ್ಲಿ ನಿರ್ವಹಣಾ ಕಾಮಗಾರಿ ಪ್ರಯುಕ್ತ ಡಿಸೆಂಬರ್ 5 ರಂದು ಬೆಳಿಗ್ಗೆ 9 ಯಿಂದ ಸಂಜೆ 5 ಗಂಟೆವರೆಗೆ ನಗರದ ವಿವಿಧೆಡೆ ವಿದ್ಯುತ್ ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

ಹೊಸಪೇಟೆ ವಿದ್ಯುತ್ ವಿತರಣಾ ಕೇಂದ್ರದ ವ್ಯಾಪ್ತಿಯ ಸ್ಟೇಷನ್ ರೋಡ್, ಚಾಪಲಗಟ್ಟ, ಇಂಡಸ್ಟ್ರೀಯಲ್ ಏರಿಯ, ಅಂಬೇಡ್ಕರ್ ವೃತ್ತ, ಇಂದಿರಾ ನಗರ, ಡ್ರೆಸ್ ಕ್ಯಾಂಪ್, ರಾಜೀವ್ ನಗರ, ಪಟೇಲ್ ನಗರ ಇವಿ ಕ್ಯಾಂಪ್, ವೆಂಕಯ್ಯ ಕ್ಯಾಂಪ್, ಎಂ.ಜೆ. ನಗರ, ಬಸವೇಶ್ವರ ಬಡಾವಣೆ, ಅನ್ನಪೂರ್ಣ ಬಡಾವಣೆ, ಚಿತ್ತವಾಡ್ಗಿ, ಸಾಯಿರಾಮ್ ಬಡಾವಣೆ, ಶರಣ ಬಸವೇಶ್ವರ ಕಾಲೋನಿ, ಕಾಲೇಜು ರಸ್ತೆ, ಭಾರತಿ ನಗರ, ತಿರುಮಲ ನಗರ, ಅಮರಾವತಿ ಹಾಗೂ ಹಳೆ ಅಮರಾವತಿ ವ್ಯಾಪ್ತಿಯಲ್ಲಿ ವಿದ್ಯುತ್ ಸರಬರಾಜಿನಲ್ಲಿ ಅಡಚಣೆ ಆಗಲಿದ್ದು, ಗ್ರಾಹಕರು ಸಹಕರಿಸಬೇಕು ಎಂದು ಜೆಸ್ಕಾಂನ ನಗರ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ್ (ವಿ) ತಿಳಿಸಿದ್ದಾರೆ.

**IN THE COURT OF THE CIVIL JUDGE & J.M.F.C. AT KUDLIGI**
**Crl. Misc. No.1876/2024**

Between: 1)G.Sharanappa son of Late G. Channabasappa, aged about 70 years, 2)Smt. B.Sharanamma D/o of Late G.Channa basappa, aged about 68 years, 3)G.Kotrappa son of Late G.Channabasappa, aged about 65 years, 4) G.Ajjappa, son of Late G.Channabasappa, aged about 63 years, 5)Smt. Kotramma, D/o of Late G.Channabasappa, aged about 61 years, 6) G. Vrushibendrappa, son of Late G.Channabasappa, aged about 59 years, 7) Smt. Manjamma, D/o of Late G.Channabasappa, aged about 57 years,
All are Hindu, Agriculturist, R/o Chapparadahalli village, in Kottur Taluk, Vijayanagara District ....Petitioner And
The Tahasildar Kudligi ...... Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioners have instituted above petition to get the death certificate of their deceased Father by name G.Channa basappa, Son of Late Ajjappa was died on 10/08/1985 at Chapparadahalli village, in Kottur Taluk, Vijayanagara District. on the file of the civil Judge & JMFC at Kudligi, the Tahasildar Kottur is the respondent. The interested persons are hereby summoned to appear in this court in person or by pleader duly instructed and able to answer all material question relating to the above petition on 30/12/2024 at 11 A.M. and interested persons are directed to produce all the documents upon which you intended to rely in support of your defense. Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 29/10/2024.

**By Order of the court**
**Chief Ministerial Officer**
Civil Judge (J.D) Court Kudligi
**G.Channabasappa**
**Advocate, Kudligi**

**IN THE COURT OF THE CIVIL JUDGE & J.M.F.C. AT KUDLIGI**
**Crl. Misc. No.1880/2024**

Between: 1)Basavaraja.B, son of Late Shivalingappa, aged about 61 years, 2)Manjunatha, son of Late Shivalingappa, aged about 54 years, 3)Veeresh.B, son of Late Shivalingappa, aged about 47 years,
All are Hindu, Agriculturist, R/o Bayalu thumbaraguddi village, in Kudligi Taluk, Vijayanagara District . ... Petitioner And
The Tahasildar Kudligi … Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioners have instituted above petition to get the death certificate of their deceased Father by name Gowripurada Thipperudrappa, Son of Late Chaliyappa was died on 01/06/2003 at Bayaluthumbaraguddi village, in Kudligi Taluk, Vijayanagara District. on the file of the civil Judge & JMFC at Kudligi, the Tahasildar Kottur is the respondent. The interested persons are hereby summoned to appear in this court in person or by pleader duly instructed and able to answer all material question relating to the above petition on 19/12/2024 at 11 A.M. and interested persons are directed to produce all the documents upon which you intended to rely in support of your defense.
Take notice that in default of your appearance on that day, above mentioned case will be heard and determined ex parte.

Given under my hand and seal of this Hon'ble Court on 29/10/2024..

**By Order of the court**
**Chief Ministerial Officer**
Civil Judge (J.D) Court Kudligi
**G.Channabasappa**
**Advocate, Kudligi**

**IN THE COURT OF THE CIVIL JUDGE & J.M.F.C. AT KUDLIGI**
**Crl. Misc. No.1879/2024**

Between: 1) Smt.Basamma, D/o Late Sannabasappa Guli, aged about 60 years, 2) Basavaraja, son of Late Sannabasappa Guli, aged about 58 years, 3) Gangappa, son of Late Sannabasappa Guli, aged about 56 years, 4) Nagaraja, son of Late Sannabasappa Guli, aged about 54 years, All are Hindu, Agriculturist, R/o Bayaluthumbaraguddi village, in Kudligi Taluk, Vijayanagara District. .... Petitioner And
The Tahasildar Kudligi … Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioners have instituted above petition to get the death certificate of their deceased Mother by name G.Siddamma, Wife of Late Sanna Basappa was died on 27/02/1977 at Bayaluthumbaraguddi village, in Kudligi Taluk, Vijayanagara District. on the file of the civil Judge & JMFC at Kudligi, the Tahasildar Kottur is the respondent. The interested persons are hereby summoned to appear in this court in person or by pleader duly instructed and able to answer all material question relating to the above petition on 05/12/2024 at 11 A.M. and interested persons are directed to produce all the documents upon which you intended to rely in support of your defense. Take notice that in default of your appearance on that day, above mentioned case will be heard and determined ex parte.
Given under my hand and seal of this Hon'ble Court on 29/10/2024.

**By Order of the court**
**Chief Ministerial Officer**
Civil Judge (J.D) Court Kudligi
**G.Channabasappa**
**Advocate, Kudligi**

**IN THE COURT OF THE CIVIL JUDGE & J.M.F.C. AT KUDLIGI**
**Crl. Misc. No.1877/2024**

Between:1)G.Sharanappa son of Late G. Channabasappa, aged about 70 years, 2) Smt. B.Sharanamma D/o of Late G.Channabasappa, aged about 68 years, 3) G.Kotrappa son of Late G.Channabasappa, aged about 65 years, 4) G.Ajjappa, son of Late G.Channabasappa, aged about 63 years, 5)Smt. Kotramma, D/o of Late G.Channabasappa, aged about 61 years, 6) G.Vrushibendrappa, son of Late G.Channa basappa, aged about 59 years, 7)Smt. Manjamma, D/o of Late G.Channabasappa, aged about 57 years, All are Hindu, Agriculturist, R/o Chapparadahalli village, in Kottur Taluk, Vijayanagara District. ...Petitioner And
The Tahasildar Kottur ...... Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioners have instituted above petition to get the death certificate of their deceased Mother by name Basamma Wife of Late G.Channabasappa, was died on 05/06/1998 at Chapparadahalli village, in Kottur Taluk, Vijayanagara District. on the file of the civil Judge & JMFC at Kudligi, the Tahasildar Kottur is the respondent. The interested persons are hereby summoned to appear in this court in person or by pleader duly instructed and able to answer all material question relating to the above petition on 05/12/2024 at 11 A.M. and interested persons are directed to produce all the documents upon which you intended to rely in support of your defense. Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 29/10/2024.

**By Order of the court**
**Chief Ministerial Officer**
Civil Judge (J.D) Court Kudligi
**G.Channabasappa**
**Advocate, Kudligi**

**IN THE COURT OF THE CIVIL JUDGE & J.M.F.C. AT KUDLIGI**
**Crl. Misc. No.278/2024**

Between: 1) Smt. Eramma daug hter of late Sanna Thimmappa, W/o Moogabasappa, aged about 60 years, 2) Basavaraja son of late Sanna Thimmappa, aged about 54 years, 3) Smt. Basamma daughter of late Sanna Thimmappa, W/o Manjanna, aged about 50 years, 4) S.T.Gulappa son of late Sanna Thimmappa, aged about 43 years, All are Hindu, Agriculturist, R/o Bellikatte village, in Kudligi Taluk, Vijayanagara District. ….Petitioner And
The Tahasildar Kudligi ….Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONER.**

Whereas the above petitioners have instituted above petition to get the death certificate of their deceased father by name Sanna Thimmappa son of late Channappa was died on 10/10/2007 at Bellikatte village, in Kudligi Taluk, Vijayanagara District on the file of the civil Judge & JMFC at Kudligi, the Tahasildar Kudligi is the respondent. The interested persons are hereby summoned to appear in this court in person or by pleader duly instructed and able to answer all material question relating to the above petition on 10/01/2025 at 11 A.M. and interested persons are directed to produce all the documents upon which you intended to rely in support of your defense.

Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 29/10/2024.

**By Order of the court**
**Chief Ministerial Officer**
Civil Judge (J.D) Court Kudligi
**G.Channabasappa**
**Advocate, Kudligi**

**IN THE COURT OF THE CIVIL JUDGE & J.M.F.C. AT KUDLIGI**
**Crl. Misc. No.1430/2024**

Between: 1) Smt. Gouramma wife of late Pathreppa, aged about 68 years, 2) Smt. Parthremma daughter of late Pathreppa, aged about 55 years, 3) Rudrappa son of late Pathreppa, aged about 53 years, 4) Smt. Rathnamma daughter of late Pathreppa, aged about 50 years, 5) B. Moogappa son of late Pathreppa, aged about 48 years, 6) B.Nagaraja son of late Pathreppa, aged about 45 years, 7) Smt. Tungamma duagh ter of late Pathreppa, aged about 43 years, 8) Thippeswamy son of late Pathreppa, aged about 40 years, All are Hindus, Agriculturists, R/o Bayalutumbaraguddi village, in Kudligi Taluk, Vijayanagara District. … Petitioner And
The Tahasildar Kudligi … Respondent

**SUMMONS TO INTERESTED PERSON U/O V RULE 20(A) R/W SEC 151 OF CPC FILED ON BEHALF OF THE PETITIONERS.**

Whereas the above petitioners have instituted above petition to get the death certificate of their deceased Petitioners No.1's sister, Petitioner No.2 to 4's mother, petitioner No. 5 to 8's Elder Mother by name Smt. Veeramma wife of late B.Pathreppa was died on 12/06/1975 at Bayalutumbaraguddi village, in Kudligi Taluk, Vijayanagara District on the file of the civil Judge & JMFC at Kudligi, the Tahasildar Kudligi is the respondent. The interested persons are hereby summoned to appear in this court in person or by pleader duly instructed and able to answer all material question relating to the above petition on 11/12/2024 at 11 A.M. and interested persons are directed to produce all the documents upon which you intended to rely in support of your defense. Take notice that in default of your appearance on that day, above mentioned case will be heard and determined ex parte. Given under my hand and seal of this Hon'ble Court on 21/10/2024.

**By Order of the court**
**Chief Ministerial Officer**
Civil Judge (J.D) Court Kudligi
**G.Channabasappa**
**Advocate, Kudligi**




## ವಿಶ್ವ ಏಡ್ಸ್ ದಿನಾಚರಣೆ ಡಿ.3,4 ವಿವಿಧ ಕಾರ್ಯಕ್ರಮ

**ಹಂಪಿ ಟೈಮ್ಸ್ ಹೊಸಪೇಟೆ**

ವಿಶ್ವ ಏಡ್ಸ್ ದಿನಾಚರಣೆ ಅಂಗವಾಗಿ ಡಿಸೆಂಬರ್ 3 ರಂದು ಸಂಜೆ 5 ಗಂಟೆಗೆ ಅಂಬೇಡ್ಕರ್ ವೃತ್ತದಿಂದ ಪುನೀತ್ ರಾಜಕುಮಾರ್ ವೃತ್ತದವರೆಗೆ ಕ್ಯಾಂಡಲ್ ಲೈಟ್ ಜಾಥಾ ಮತ್ತು ಡಿಸೆಂಬರ್ 4 ರಂದು ವೇದಿಕೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್, ಜಿಪಂ ಸಿಇಒ ನೋಂಗ್ಜಾಯ್ ಮಹಮ್ಮದ್ ಅಲಿ ಅಕ್ರಂ ಷಾ ಮತ್ತು ಹೊಸಪೇಟೆಯ ತಾಲೂಕು ಕಾನೂನು ಸೇವಾ ಸಮಿತಿ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದು, ಸಾರ್ವಜನಿಕರು ಕ್ಯಾಂಡಲ್ ಲೈಟ್ ಮತ್ತು ವೇದಿಕೆ ಕಾರ್ಯಕ್ರಮದಲ್ಲಿ ಭಾಗವಹಿಸಿ ವಿಶ್ವ ಏಡ್ಸ್ ದಿನಾಚರಣೆ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ

## ಕೊಟ್ಟೂರು ತಾಲೂಕಿನ 14 ಗ್ರಾಪಂಗಳಲ್ಲಿ 2 ದಿನ ಕರ ವಸೂಲಿ
# ಖಜಾನೆ ಸೇರಿದ 12.22 ಲಕ್ಷ ರೂ.ತೆರಿಗೆ

**ಹಂಪಿ ಟೈಮ್ಸ್ ಕೊಟ್ಟೂರು**

ಕೊಟ್ಟೂರು ತಾಲೂಕಿನ 14 ಗ್ರಾಪಂಗಳ 2 ದಿನಗಳ ಒಟ್ಟು ಕರ ವಸೂಲಾತಿ 12.22 ಲಕ್ಷ ರೂ.ಸಂಗ್ರಹವಾಗಿದೆ ಎಂದು ತಾಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅದಿಕಾರಿ ಡಾ.ಬಾಳಪ್ಪ ಆನಂದ ಕುಮಾರ ತಿಳಿಸಿದರು.

ತಾಲೂಕಿನ ಗ್ರಾಪಂಗಳ ಹಳ್ಳಿಗಳಲ್ಲಿ ಶುಕ್ರವಾರ ಹಾಗೂ ಶನಿವಾರ ಕರ ವಸೂಲಿ ಮಾಸಾಚರಣೆ ಕೈಗೊಂಡ ವೇಳೆಯಲ್ಲಿ 5.91 ಲಕ್ಷ ರೂ. ಶುಕ್ರವಾರ ಸಂಗ್ರಹವಾಗಿದೆ. 6.31 ಲಕ್ಷ ರೂ. ಶನಿವಾರ ತೆರಿಗೆ ಸಂಗ್ರಹಣೆಯಾಗಿದೆ ಎಂದರು.




ನಿಂಬಳಗೇರಿ ಗ್ರಾಪಂ– 13266.03, ಚಿರಿಬಿ–19894.21, ತೂಲಹಳ್ಳಿ– 51526, ಕೆ.ಅಯ್ಯನಹಳ್ಳಿ–42337.86, ಕಾಳಾಪುರ– 23632, ಅಲಬೂರ–13419, ದೂಪದಹಳ್ಳಿ –47048, ಅಂಬಳಿ–23829, ಹ್ಯಾಳ್ಯಾ –66431, ಉಜ್ಜಿನಿ–43875.5, ಕೋಗಳಿ– 72017, ಕಂದಗಲ್ಲು–71513, ರಾಂಪುರ– 46454, ನಾಗರಕಟ್ಟೆ–24707 ರೂ ತೆರಿಗೆ ಶುಕ್ರವಾರ ಸಂಗ್ರಹವಾಗಿದೆ ಎಂದರು.

ಕರ ವಸೂಲಿ ಮಾಸಾಚರಣೆ ಅಭಿಯಾನಕ್ಕೆ ನೋಡಲ್ ಅಧಿಕಾರಿ ಜಿಲ್ಲಾ ಪಂಚಾಯತಿಯ ಸಹಾಯಕ ಉಪ ಕಾರ್ಯದರ್ಶಿಗಳು ಮೌನೇಶ್ ಹ್ಯಾಳ್ಯಾ ಗ್ರಾಪಂ ಚಾಲನೆ ನೀಡಿದರು. ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಬಿ. ಆನಂದಕುಮಾರ್ ಅವರು ತಾಲೂಕಿನ ಹಳ್ಳಿಗಳಿಗೆ ತೆರಳಿ ತೆರಿಗೆ ಸಂಗ್ರಹದ ಮೇಲ್ವಿಚಾರಣೆ ನೆಡೆಸಿದರು. ಸಹಾಯಕ ನಿರ್ದೇಶಕರು (ಗ್ರಾ. ಉ) ಹೆಚ್. ವಿಜಯಕುಮಾರ್, ವ್ಯವಸ್ಥಾಪಕ ರಾದ ಪುಷ್ಪಲತಾ ಇದ್ದರು. ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಗ್ರಾ. ಪಂಚಾಯಿತಿ ಸಿಬ್ಬಂದಿ ಕರ ವಸೂಲಿಯಲ್ಲಿ ಪಾಲ್ಗೊಂಡಿದ್ದರು

## ಆನಂದ ಬಾಣ




14 ಭಾಷೆಗಳಲ್ಲಿ ಹಂಪಿ ಟೈಮ್ಸ್ ವೆಬ್‌ನ್ಯೂಸ್‌ಗೆ
ಭೇಟಿ ನೀಡಿ, ನಿಮ್ಮ ಮಾತೃಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
www.hampitimes.com

# ಎಸ್.ಬಿ.ಚಂದ್ರಶೇಖರ್‌ಗೆ ಗೌರವ ಡಾಕ್ಟರೇಟ್

**ಹಂಪಿ ಟೈಮ್ಸ್ ಮರಿಯಮ್ಮನಹಳ್ಳಿ**

ಪಟ್ಟಣದ ಲೇಖಕ, ಸಾಮಾಜಿಕ ಚಿಂತಕ ಬರಹಗಾರ, ದಲಿತ ಹೋರಾಟಗಾರ ಎಸ್.ಬಿ. ಚಂದ್ರಶೇಖರ ಅವರಿಗೆ ಗೌರವ ಡಾಕ್ಟರೇಟ್ ನೀಡಿ ಗೌರವಿಸಲಾಗಿದೆ.

ಏಶಿಯಾ ಇಂಟರ್ ನ್ಯಾಷನಲ್ ಕಲ್ಚರಲ್, ರಿಸರ್ಚ್ ಯುನಿವರ್ಸಿಟಿ, ಯು.ಎಸ್.ಎ. ವತಿಯಿಂದ ಇದೇ ನವೆಂಬರ್ 29ರಂದು ಜರುಗಿದ ಘಟಿಕೋತ್ಸವದಲ್ಲಿ ಎಸ್.ಬಿ. ಚಂದ್ರಶೇಖರ್ ಅವರ ಸಾಮಾಜಿಕ ಸೇವೆಯನ್ನು ಗುರುತಿಸಿ. ಗೌರವ ಡಾಕ್ಟರೇಟ್ ನೀಡಿ ಗೌರವಿಸಿದೆ.



ಎಸ್.ಬಿ. ಚಂದ್ರಶೇಖರ್ ಅವರು ದಶಕಗಳಿಂದ ದಮನಿತ ಜನಾಂಗಗಳಲ್ಲಿ ಸಾಮಾಜಿಕ, ರಾಜಕೀಯ, ಶೈಕ್ಷಣಿಕ ಜಾಗೃತಿಯನ್ನು ಮೂಡಿಸಲು, ನಾಡಿನಾದ್ಯಾಂತ ನೂರಾರು ವಿಚಾರ ಸಂಕಿರಣ, ಅಧ್ಯಯನ ಶಿಬಿರ, ಉಪನ್ಯಾಸ ಗಳನ್ನು ನೀಡಿ ಜಾಗೃತಿ ಕಾರ್ಯಕ್ರಮಗಳಲ್ಲಿ ತೊಡಗಿ ಕೊಂಡಿರುವುದನ್ನು ಗಮನಿಸಿ ಈ ಗೌರವಡಾಕ್ಟರೇಟ್ ಪದವಿಯನ್ನು ನೀಡಿ ಗೌರವಿಸಿದ್ದಾರೆ.

ಮರಿಯಮ್ಮನಹಳ್ಳಿಯಲ್ಲಿ ಗೌರವ ಡಾಕ್ಟರೇಟ್ ಪದವಿ ಪಡೆದವರ ಗಣ್ಯರ ಸಂಖ್ಯೆ ಈಗ ಮೂರಕ್ಕೆ ಏರಿದೆ. ವೃತ್ತಿರಂಗ ಕಲಾವಿದೆ ಕೆ.ನಾಗರತ್ನಮ್ಮ, ಜನಪದ ಕಲಾವಿದೆ ಪದ್ಮಶ್ರೀ ಪುರಸ್ಕೃತೆ ಮಾತಾ ಮಂಜಮ್ಮ ಜೋಗತಿ ಹಾಗೂ ಎಸ್.ಬಿ. ಚಂದ್ರಶೇಖರ್ ಅವರಿಗೆ ಗೌರವ ಡಾಕ್ಟರೇಟ್ ದೊರೆತಿರುವುದು ಮರಿಯಮನಹಳ್ಳಿ ಪಟ್ಟಣದ ಕೀರ್ತಿ ಹೆಚ್ಚಿಸಿದೆ.

# ಅಜ್ಞಾನ ತೊಲಗಿಸುವುದೇ ಕಾರ್ತೀಕ ದೀಪೋತ್ಸವ

**ಹಂಪಿ ಟೈಮ್ಸ್ ಕಂಪ್ಲಿ**

ಮನಸ್ಸಿನ ಅಜ್ಞಾನವನ್ನು ತೊಳೆಯುವುದೇ ಕಾರ್ತೀ ಕ ದೀಪೋತ್ಸವ ಎಂದು ಪಟ್ಟಣದ ಬಲಿಜ ಸಂಘದ ಗೌರವಾಧ್ಯಕ್ಷ ಪಿ.ಶ್ರೀನಿವಾಸ ಹೇಳಿದರು.

ಪಟ್ಟಣದ ಬಲಿಜ ಭವನದಲ್ಲಿ ಶ್ರೀಯೋಗಿ ನಾರೇಯಣ ಯತೀಂದ್ರರ 8ನೇವರ್ಷದ ಮಹಾ ಕಾರ್ತೀಕ ದೀಪೋತ್ಸವ ಸಮಾರಂಭದ ಅಧ್ಯಕ್ಷತೆವಹಿಸಿ ಶನಿವಾರ ಮಾತನಾಡಿ, ಎಲ್ಲೆಡೆ ಜ್ಞಾನದ ದೀಪ ಬೆಳಗಿಸುವ ಸಂಕೇತವಾಗಿ ದೀಪೋತ್ಸವ ಆಚರಿಸಲಾಗುತ್ತದೆ. ಸರ್ವರೂ ಒಗ್ಗೂಡಿ ಬಾಳಿ ಬದುಕಬೇಕು ಎಂದು ಹೇಳಿದರು.




ದೇವಲಾಪುರದ ತಬಲವಾದಕ ವಿರುಪಾಕ್ಷಪ್ಪ ಕಾರ್ತೀಕೋತ್ಸವಕ್ಕೆ ಚಾಲನೆ ನೀಡಿದರು. ಮಹಿಳಾ ಬಲಿಜ ಸಂಘದ ಅಧ್ಯಕ್ಷೆ ಶಾರದಾ ಲೋಕೇಶ, ಬಲಿಜ ಸಂಘದ ಉಪಾಧ್ಯಕ್ಷ ಕೆ.ಶಂಕರ್, ಕಾರ್ಯದರ್ಶಿ ಇಂಗಳಗಿ ನಾರಾಯಣಪ್ಪ, ಪ್ರಮುಖರಾದ ಎಂ.ಆರ್.ಶ್ರೀನಿವಾಸ, ಎಂ.ರಮೇಶ, ಪಿ. ವೆಂಕೋಬಣ್ಣ, ಇತರರಿದ್ದರು.

# ಇಂದು ವಿಶ್ವ ವಿಕಲಚೇನತರ ದಿನಾಚರಣೆ

**ಹಂಪಿ ಟೈಮ್ಸ್ ಹೊಸಪೇಟೆ**

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ತಾಲೂಕು ಕಾನೂನು ಸೇವಾ ಸಮಿತಿ ಹೊಸಪೇಟೆ, ವಿಕಲಚೇತನರು ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಮತ್ತು ವಿವಿಧ ಇಲಾಖೆಗಳ ಸಂಯುಕ್ತಾಶ್ರಯದಲ್ಲಿ ವಿಶ್ವ ವಿಕಲಚೇತನರ ದಿನಾಚರಣೆ ಕಾರ್ಯಕ್ರಮವನ್ನು ಡಿಸೆಂಬರ್ 03 ರಂದು ಬೆಳಿಗ್ಗೆ 10:30ಕ್ಕೆ ಹೊಸಪೇಟೆಯ ಶ್ರೀ ವೆಂಕಟೇಶ್ವರ ಕಲ್ಯಾಣ ಮಂಟಪ್ಪದಲ್ಲಿ ಹಮ್ಮಿಕೊಳ್ಳಲಾಗಿದೆ.

ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸಚಿವರು ಹಾಗೂ ವಿಜಯನಗರ ಮತ್ತು ಬಳ್ಳಾರಿ ಜಿಲ್ಲೆಗಳ ಉಸ್ತುವಾರಿ ಸಚಿವರಾದ ಬಿ.ಜೆಡ್. ಜಮೀರ್ ಅಹ್ಮದ್ ಖಾನ್ ಅವರು ಕಾರ್ಯಕ್ರಮ ಉದ್ಘಾಟಿಸುವರು.

ವಿಜಯನಗರ ವಿಧಾನಸಭಾ ಕ್ಷೇತ್ರದ ಶಾಸಕರಾದ ಹೆಚ್.ಆರ್. ಗವಿಯಪ್ಪ ಅವರು ಅಧ್ಯಕ್ಷತೆ ವಹಿಸುವರು.

ಮುಖ್ಯ ಅತಿಥಿಗಳಾಗಿ ಸಂಸದರಾದ ಈ.ತುಕಾರಾಂ ಹಾಗೂ ಡಾ.ಪ್ರಭಾ ಮಲ್ಲಿಕಾರ್ಜುನ, ಶಾಸಕಾರಾದ ಕೆ.ನೇಮಿರಾಜ ನಾಯ್ಕ, ಡಾ.ಎನ್.ಟಿ. ಶ್ರೀನಿವಾಸ್, ಎಲ್.ಕೃಷ್ಣನಾಯಕ, ಎಂ.ಪಿ.ಲತಾ ಮಲ್ಲಿಕಾರ್ಜುನ ಹಾಗೂ ಬಿ.ದೇವೇಂದ್ರಪ್ಪ, ವಿಧಾನ ಪರಿಷತ್ ಸದಸ್ಯರಾದ ಡಾ.ಚಂದ್ರಶೇಖರ ಬಿ.ಪಾಟೀಲ್, ಶಶೀಲ್ ಜಿ. ನಮೋಶಿ ಹಾಗೂ ವೈ.ಎಂ. ಸತೀಶ್, ಹೊಸಪೇಟೆ ನಗರಸಭೆ ಅಧ್ಯಕ್ಷರಾದ ರೂಪೇಶ್ ಕುಮಾರ ಎನ್, ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಹೆಚ್.ಎನ್. ಎಫ್ ಇಮಾಮ್ ನಿಯಾಜಿ ಅವರು ಹಾಗೂ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ನೋಂಗ್ಜಾಯ್ ಮೋಹಮ್ಮದ್ ಅಲಿ ಅಕ್ರಮ್ ಷಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಶ್ರೀಹರಿಬಾಬು ಬಿ.ಎಲ್, ಅಪರ ಜಿಲ್ಲಾಧಿಕಾರಿ ಇ. ಬಾಲಕೃಷ್ಣಪ್ಪ, ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಅವಿನಾಶಲಿಂಗ ಎಸ್. ಗೋಟಖಿಂಡಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಉಪ ನಿರ್ದೇಶಕಿ ಶ್ವೇತಾ ಎಸ್ ಇವರು ಉಪಸ್ಥಿತರಿರುವರು.

ಅಂದು ಬೆಳಿಗ್ಗೆ 9 ಗಂಟೆಗೆ ಶ್ರೀ ಪುಟ್ಟರಾಜ ಗವಾಯಿಗಳ ಭಾವಚಿತ್ರದೊಂದಿಗೆ ಮೆರವಣಿಗೆಯನ್ನು ನೆಹರು ಕಾಲೋನಿಯ ಸಹಕಾರಿ ಕಲ್ಯಾಣ ಮಂಟಪದಿಂದ ಆರಂಭಸಿ, ವಾಲ್ಮೀಕಿ ವೃತ್ತ, ರಾಜ ವೀರಮದಕರಿ ವೃತ್ತ, ಉದ್ಯೋಗ ಪೆಟ್ರೋಲ್ ಬಂಕ್, ಮಸೀದಿ ಮಾರ್ಗ, ಗಾಂಧಿ ವೃತ್ತ, ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಿಂದ ಶ್ರೀ ವೆಂಕಟೇಶ್ವರ ಕಲ್ಯಾಣ ಮಂಟಪದವರೆಗೆ ಮೆರವಣಿಗೆ ಸಾಗುವುದು ಎಂದು ಪ್ರಕಟಣೆ ತಿಳಿಸಿದೆ.

## SSLC ಈ ಬಾರಿ ಫಲಿತಾಂಶ ನಮ್ಮದೆ ಹೈಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

HAMPI TIMES MARGADARSHI

ಮನಸ್ಸು ಮಾಡು - ಕರ್ತವ್ಯ ನಿಷ್ಠನಾಗು - ಕಾದು ನೋಡು

ಹಂಪಿ ಟೈಮ್ಸ್ ಇ-ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ನಿನ್ನ ಬಾಳಿಗೆ ನೀನೇ ಶಿಲ್ಪಿ

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಕನ್ನಡ

### ವಿಷಯ : ಕನ್ನಡ (ಪ್ರ.ಭಾ) ಪದ್ಯಪಾಠ : ಶಬರಿ

**ಲೇಖಕರ ಪರಿಚಯ – ಪು.ತಿ. ನರಸಿಂಹಾಚಾರ್ಯ.**



(ಮಾರ್ಚ್–2017, 2018 ಸೆಪ್ಟಂಬರ್–2020, ಆಗಸ್ಟ್ –2024)

ಪುರೋಹಿತ ತಿರುನಾರಾಯಣಯ್ಯಂಗಾರ್ ನರಸಿಂಹಾಚಾರ್ಯ ಇವರು ಕ್ರಿಸ್ತಶಕ 1905ರಲ್ಲಿ ಮಂಡ್ಯ ಜಿಲ್ಲೆಯ ಮೇಲುಕೋಟೆಯಲ್ಲಿ ಜನಿಸಿದರು. ಇವರು ಶಬರಿ, ಅಹಲ್ಯೆ, ಗೋಕುಲ ನಿರ್ಗಮನ, ವಿಕಟಕವಿ ವಿಜಯ, ಹಂಸದಮಯಂತಿ ಮತ್ತು ಇತರ ರೂಪಕಗಳು, ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರ 'ಶ್ರೀ ಹರಿ ಚರಿತೆ' ಕೃತಿಗೆ ಪಂಪ ಪ್ರಶಸ್ತಿ ಲಭಿಸಿದೆ. ಶ್ರೀಯುತರಿಗೆ ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳನ್ನು ನೀಡಿ ಗೌರವಿಸಲಾಗಿದೆ.

**ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿರಿ.**

**1. ಶ್ರೀ ರಾಮನ ತಂದೆ ಹೆಸರೇನು ?**
ಉತ್ತರ– ಶ್ರೀ ರಾಮನ ತಂದೆ ಹೆಸರು ದಶರಥ.

**2. ಶ್ರೀರಾಮನಿಗೆ ಸಮರ್ಪಿಸಲು ಶಬರಿ ಏನನ್ನು ಸಂಗ್ರಹಿಸಿದ್ದಳು ?**
ಉತ್ತರ– ಶ್ರೀರಾಮನಿಗೆ ಸಮರ್ಪಿಸಲು ಶಬರಿ ಪರಿಮಳದ ಹೂವು, ಮಧುಪರ್ಕ ಮತ್ತು ರುಚಿಕರ ಹಣ್ಣು ಹಂಪಲುಗಳನ್ನು ಸಂಗ್ರಹಿಸಿದ್ದಳು.

**3.ಮತಂಗಾ ಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಯಾರು? (ಮಾರ್ಚ್–2019, ಜೂನ್–2019 ಜೂನ್–2022)**
ಉತ್ತರ– ಮತಂಗಾಶ್ರಮದಲ್ಲಿ ವಾಸವಿದ್ದ ತಪಸ್ವಿನಿ ಶಬರಿ.

**4. ರಾಮ ಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ಯಾರು? (ಮಾರ್ಚ್–2017,2018, ಸೆಪ್ಟಂಬರ್–2020, ಮಾರ್ಚ್–2022)**
ಉತ್ತರ– ರಾಮ ಲಕ್ಷ್ಮಣರಿಗೆ ಮತಂಗಾಶ್ರಮಕ್ಕೆ ಹೋಗಲು ಸೂಚಿಸಿದವರು ದನು (ಕಬಂಧ) ಎಂಬ ಹೆಸರಿನ ರಾಕ್ಷಸ.

**5. ಶಬರಿ ಗೀತ ನಾಟಕದ ಕತೃ ಯಾರು ?**
ಉತ್ತರ– ಶಬರಿ ಗೀತ ನಾಟಕದ ಕತೃ ಪು.ತಿ .ನರಸಿಂಹಾಚಾರ್ಯ.

**ಕೊಟ್ಟಿರುವ ಪ್ರಶ್ನೆಗಳಿಗೆ ಮೂರು –ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿರಿ.**

**1. ರಾಮನು ಗಿರಿವನವನ್ನು ಏನೆಂದು ಪ್ರಾರ್ಥಿಸಿದನು.**
ಉತ್ತರ– ರಾಮನು ಗಿರಿವನವನ್ನು ಕುರಿತು" ಗಿರಿವನಗಳೇ, ನಾನು ನಿಮ್ಮನ್ನು ಬೇಡಿಕೊಳ್ಳುವೆನು, ಹೇಳಿರಿ ನನ್ನ ಪ್ರೀತಿಯ ರಾಣಿ ಸೀತೆಯು ನನಗೆ ದೊರೆಯುವಳೇ ? ಅವಳು ಇರುವ ಸ್ಥಳವನ್ನು ನೀವು ತಿಳಿದಿರುವಿರೇ ? ನನ್ನ ಹೃದಯದ ಈ ದುಃಖವು ನಾಶವಾಗುತ್ತಿಲ್ಲವಲ್ಲ" ಎಂದು ಪ್ರಾರ್ಥಿಸಿದನು.

**2. ಲಕ್ಷ್ಮಣನು ಅಣ್ಣನನ್ನು ಹೇಗೆ ಸಂತೈಸಿದನು ?(ಮಾರ್ಚ್ –2024 ಜೂನ್ –2024, ಆಗಸ್ಟ್ –2024 )**
ಉತ್ತರ– ಲಕ್ಷ್ಮಣನು ಸೀತೆಗಾಗಿ ಪರಿಸುತಪಿಸುತ್ತಿದ್ದ ಅಣ್ಣನಾದ ರಾಮನನ್ನು ಕುರಿತು " ತಾಳಿಕೋ ಅಣ್ಣ ತಾಳಿಕೋ , ಸೂರ್ಯನೇ ತೇಜಗೆಡಲು ಕಾಂತಿಯನ್ನು ನೀಡುವವರು ಯಾರು ? ರಾಮನೇ ಧೈರ್ಯ ಗೆಡಲು ಕಾಂತಿಯನ್ನು ನೀಡುವವರು ಯಾರು ? " ಎಂದು ಹೇಳಿ ಸಂತೈಸಿದನು.

**3 ರಾಮನ ಸ್ವಾಗತಕ್ಕಾಗಿ ಶಬರಿ ಮಾಡಿಕೊಂಡಿದ್ದ ಸಿದ್ಧತೆಗಳೇನು ?**
ಉತ್ತರ– ರಾಮನ ಸ್ವಾಗತಗಾಗಿ ಶಬರಿಯು ಸವಿಯಾದ ಬಗೆ ಬಗೆಯ ಹಣ್ಣುಗಳನ್ನು, ಜೇನುತುಪ್ಪ ಅಧಿಕವಾಗಿರುವ ಮಧುಪರ್ಕವೆಂಬ ಪಾನೀಯವನ್ನು, ಸುವಾಸನೆಯಿಂದ ಕೂಡಿದ ಬಾಡದ ಹೂವುಗಳನ್ನು ಸಂಗ್ರಹಿಸಿ ಸಿದ್ದ ಮಾಡಿಕೊಂಡಿದ್ದಳು.

**4 ಶಬರಿಯು ರಾಮ ಲಕ್ಷ್ಮಣರನ್ನು ಉಪಚರಿಸಿದ ರೀತಿಯನ್ನು ವಿವರಿಸಿ. (ಮಾರ್ಚ್ –2020, ಮಾರ್ಚ್ –2024)**
ಉತ್ತರ– ಶಬರಿಯು ರಾಮ ಲಕ್ಷ್ಮಣರನ್ನು ಕಂಡು ಬೆರಗಾಗಿ, ಹತ್ತಿರಕ್ಕೆ ಬಂದು, ಮೈಯನ್ನು ಮುಟ್ಟಿ, ಕಾಲಿಗೆ ಬಿದ್ದು ನಮಸ್ಕರಿಸಿ, ಕೈಯನ್ನು ಕಣ್ಣಿಗೆ ಒತ್ತಿಕೊಂಡಳು. ಬಗೆ ಬಗೆಯ ಸುವಾಸನೆಯುಳ್ಳ ಹೂಮಾಲೆಯನ್ನು ಕೊರಳಿಗೆ ಹಾಕಿ ಸಂತಸ ಪಟ್ಟಳು." ಜಗತ್ತಿನಲ್ಲಿ ಇದರಷ್ಟು ರುಚಿಯಾದ ಹಣ್ಣೇ ಇಲ್ಲ, ನಿಮಗೆಂದೇ ತಂದೆನು. ಎಂದು ಹೇಳುತ್ತಾ ಸವಿ ಯಾದ ಹಣ್ಣುಗಳನ್ನು ನೀಡಿ ಉಪಚರಿಸಿದಳು.

**5. ಆತಿಥ್ಯ ಸ್ವೀಕರಿಸಿದ ರಾಮ ಲಕ್ಷ್ಮಣರು ಶಬರಿಗೆ ಏನು ಹೇಳಿದರು?**
ಉತ್ತರ– ಆತಿಥ್ಯ ಸ್ವೀಕರಿಸಿದ ರಾಮ ಲಕ್ಷ್ಮಣರು ಶಬರಿಗೆ " ನಾವು ನಿನ್ನ ಪ್ರೀತಿಯ ಸ್ವಾಗತದಿಂದ ಸಂತಸ ಗೊಂಡೆವು. ನಿನ್ನ ಸುಖದಲ್ಲಿ ನಮ್ಮ ಸುಖ ಕಂಡೆವು. ಕಣ್ಣಿಗೆ ಕಾಣದ ಆನಂದವನ್ನು ಅನುಭವಿಸುವ ಪುಣ್ಯ ನಮ್ಮದಾಯಿತು. ನಾವು ನಿನಗೆ ಎಂದೆಂದಿಗೂ ಋಣಿಗಳು." ಎಂದು ಹೇಳಿದರು.

www.hampitimes.com - Hampi Times Margadarshi

### ಉತ್ತಮ ಫಲಿತಾಂಶಕ್ಕೆ ಪಂಚ ಸೂತ್ರಗಳು

1. ಸಮಯ ನಿರ್ವಹಣೆ 2. ನಿಮ್ಮ ಗುರಿಯನ್ನು ನೆನೆಸಿಕೊಳ್ಳಿ 3. ಆರೋಗ್ಯ ನಿರ್ವಹಣೆ 4. ಶಾಂತ ಮನಸ್ಥಿತಿ ಇಟ್ಟುಕೊಳ್ಳಿ 5. ನಕಾರಾತ್ಮಕವಾಗಿ ಚಿಂತಿಸಬೇಡಿ

ಮಾರ್ಗದರ್ಶಿ ಶಿಕ್ಷಕರು : ಶ್ರೀ ಮಧು. ಕೆ. ಕನ್ನಡ ಭಾಷಾ ಶಿಕ್ಷಕರು, ಸರ್ಕಾರಿ ಪ್ರೌಢಶಾಲೆ ಸೂಲದಹಳ್ಳಿ, ಕೂಡ್ಲಿಗಿ (ತಾ)

ಸಾಯಿಮಣಿ ಪ್ರಕಾಶನ, ಹೊಸಪೇಟೆ